ಸಂದೇಶ ಪ್ರಚಾರ ಮತ್ತು ಮಹಿಳೆಯರು

ಲೇಖಕರು

ಮೌ| ಅಮೀನ್ ಅಹ್ಸನ್ ಇಸ್ಲಾಹಿ

ಮೌ| ಸೈಯದ್ ಅಬುಲ್ ಆಲಾ ಮೌದೂದಿ

ಅನುವಾದಕರು

ಪಿ. ನೂರ್ ಮುಹಮ್ಮದ್

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಈ ಕೃತಿಯು ಮುಸ್ಲಿಮ್ ಮಹಿಳೆಯರ ಸಾಮಾನ್ಯ ಧಾರ್ಮಿಕ ಹೊಣೆಗಾರಿಕೆಗಳು ಮತ್ತು ಇಸ್ಲಾಮೀ ಸಂದೇಶ ಪ್ರಚಾರ ಕಾರ್ಯದಲ್ಲಿ ಅವರು ನಿರ್ವಹಿಸಬೇಕಾದ ಕರ್ತವ್ಯಗಳನ್ನು ತಿಳಿಸಿ ಅವರನ್ನು ಜಾಗೃತಗೊಳಿಸುವ ಕೆಲವಾರು ಭಾಷಣಗಳ ಸಮಾಹಾರವಾಗಿದೆ. ಇದರಲ್ಲಿ ಇಸ್ಲಾಮೀ ಜೀವನ ಮತ್ತು ಧರ್ಮ ಪ್ರಚಾರ ಕಾರ್ಯ ನಿರ್ವಹಣೆಯಲ್ಲಿ ಪೂರ್ವಕಾಲದ ಮಹಾ ಮಹಿಳೆಯರು ತೋರಿದ ಮಾದರಿಯ ಹಿನ್ನೆಲೆಯಲ್ಲಿ ಈ ಕಾಲದಲ್ಲಿ ನಿರ್ವಹಿಸಬೇಕಾದ ಚಟುವಟಿಕೆಗಳ ವ್ಯಾವಹಾರಿಕ ಆದೇಶಗಳನ್ನು ನೀಡಲಾಗಿದೆ. ಮೌ| ಸೈಯದ್ ಅಬುಲ್ ಆಲಾ ಮೌದೂದಿ ಮತ್ತು ಮೌ| ಅಮೀನ್ ಅಹ್ಸನ್ ಇಸ್ಲಾಹಿಯವರು ಮುಸ್ಲಿಮ್ ಮಹಿಳೆಯರನ್ನುದ್ದೇಶಿಸಿ ಮಾಡಿದ ಪ್ರಬುದ್ಧ ಭಾಷಣಗಳನ್ನು ಪ್ರತಿಯೊಬ್ಬ ಮುಸ್ಲಿಮ್ ಮಹಿಳೆಯೂ ಅಗತ್ಯವಾಗಿ ಸ್ವಾಯತ್ತಗೊಳಿಸಬೇಕು.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

ಇಸ್ಲಾಮೀ ಸಂದೇಶ ಪ್ರಚಾರದಲ್ಲಿ ಮಹಿಳೆಯರ ಪಾತ್ರ

ಮೌ| ಅಮೀನ್ ಅಹ್ಸನ್ ಇಸ್ಲಾಹಿ

(ಅಲಹಾಬಾದ್‌ನಲ್ಲಿ ಮಹಿಳೆಯರಿಗೆ ಮಾಡಿದ ಭಾಷಣ)

ಸನ್ಮಾನ್ಯ ಮಹಿಳೆಯರೇ,

ನಗರದ ಮಾತೆಯರಿಗೆ ಮತ್ತು ಸಹೋದರಿಯರಿಗೆ ಕೆಲವು ವಿಷಯಗಳನ್ನು ತಿಳಿಸುವ ಅವಕಾಶ ದೊರೆತ ಬಗ್ಗೆ ತುಂಬಾ ಸಂತೋಷವಾಗುತ್ತಿದೆ. ಕೆಟ್ಟ ಶಿಕ್ಷಣ, ತರಬೇತಿ ಮತ್ತು ದುಷ್ಟ ಸಂಪ್ರದಾಯಗಳ ಬೆಳವಣಿಗೆಯಿಂದ ನಮ್ಮ ಸ್ಥಿತಿ ಹೇಗಿದೆ? ಮಹಿಳೆಯರಿಗೆ ಆಹಾರ-ಬಟ್ಟೆಬರೆಗಳನ್ನು ಒದಗಿಸುವಂತೆಯೇ ಮಹಿಳೆಯರ ಧಾರ್ಮಿಕ ಕರ್ತವ್ಯಗಳನ್ನೂ ಪುರುಷರೇ ನಿರ್ವಹಿಸಬೇಕೆಂಬ ಭಾವನೆ ವ್ಯಾಪಕವಾಗಿದೆ. ಆದರೆ ಸಂಪೂರ್ಣ ಕರ್ತವ್ಯ ಪ್ರಜ್ಞೆಯಿಂದ ಒಂದು ವಾಸ್ತವಿಕತೆಯನ್ನು ನಾನು ಸ್ಪಷ್ಟಪಡಿಸ ಬಯಸುತ್ತೇನೆ. ಪ್ರವಾದಿ ಮುಹಮ್ಮದ್(ಸ) ತಂದ ಧರ್ಮವು (ಇಸ್ಲಾಮ್) ಪುರುಷರಂತೆಯೇ ಮಹಿಳೆಯರಿಗೂ ಅನ್ವಯವಾಗುತ್ತದೆ. ಕರ್ತವ್ಯಗಳ ವ್ಯಾಪ್ತಿಯಲ್ಲಿ ಖಂಡಿತ ವ್ಯತ್ಯಾಸಗಳಿವೆ. ಹಾಗಿದ್ದರೂ ಧರ್ಮದ ಸ್ವೀಕಾರ, ಧರ್ಮದ ಸಂಸ್ಥಾಪನೆ, ಧರ್ಮದ ಹಾದಿಯಲ್ಲಿ ಸೇವೆ, ಅಲ್ಲಾಹನ ಮುಂದೆ ವಿಚಾರಣೆ-ಇತ್ಯಾದಿಗಳಲ್ಲಿ ಉಭಯತ್ರರೂ ಸಮಾನರು; ಸರಿಸಮಾನರು. ಹೌದು, ಓರ್ವ ಮಹಿಳೆಯು ಅಲ್ಲಾಹನು ಆಕೆಗೆ ನೀಡಿರುವ ಹಕ್ಕು ಬಾಧ್ಯತೆಗಳಲ್ಲಿ ಏನಾದರೂ ಲೋಪ ಮಾಡಿದರೆ ಪುರುಷರು ತಮ್ಮ ಲೋಪದೋಷಗಳ ಬಗ್ಗೆ ಪ್ರಶ್ನಿಸಲ್ಪಡುವಂತೆಯೇ ಆಕೆ ಅಲ್ಲಾಹನ ಮುಂದೆ ಖಂಡಿತ ಪ್ರಶ್ನಿಸಲ್ಪಡುತ್ತಾಳೆ. ಆಕೆಗೆ ವಿಚಾರಣೆಯಿಂದ ಯಾವ ರೀತಿಯಿಂದಲೂ ಪಾರಾಗಲು ಸಾಧ್ಯವಿಲ್ಲ. ನೀವು ನಿಮ್ಮ ಚರಿತ್ರೆಯನ್ನು ಓದಿದರೆ ಧರ್ಮದ ಸಂಸ್ಥಾಪನೆಯ ತ್ಯಾಗ ಪರಿಶ್ರಮಗಳಲ್ಲಿ ಮಹಿಳೆಯರು ಪುರುಷರೊಡನೆ ಹೇಗೆ ಭಾಗಿಯಾಗಿದ್ದರೆಂದು ವ್ಯಕ್ತವಾಗಬಹುದು. ಪ್ರವಾದಿಯವರು ಧರ್ಮ ಪ್ರಚಾರ ಆರಂಭಿಸಿದಾಗ ಅದನ್ನು ಸ್ವೀಕರಿಸಿದವರಲ್ಲಿ ಖದೀಜಾ(ರ) ಮೊದಲಿಗರೆಂದು ಎಲ್ಲರಿಗೂ ತಿಳಿದಿದೆ. ಆ ಕಾಲದಲ್ಲಿ ಇಸ್ಲಾಮ್ ಸ್ವೀಕಾರವು ಅಷ್ಟೊಂದು

ಸುಲಭವಾಗಿರಲಿಲ್ಲ. ಅದು ಎಲ್ಲ ವಿಪತ್ತುಗಳನ್ನು ಆಹ್ವಾನಿಸುವುದಕ್ಕೆ ತುಲ್ಯವಾಗಿತ್ತು. ಆದರೂ ಖದೀಜಾರು(ರ) ಇಸ್ಲಾಮ್ ಸ್ವೀಕರಿಸಲು ಮುಂದಾದರು, ಮಾತ್ರವಲ್ಲ ಅವರು ಪ್ರವಾದಿಯವರಿಗೆ ಧೈರ್ಯ ನೀಡುತ್ತಿದ್ದರು. ಅಲ್ಲಾಹನಿಂದ ಪರೋಕ್ಷ ಸಹಾಯ ದೊರೆಯುವುದೆಂಬ ಭರವಸೆ ನೀಡುತ್ತಿದ್ದರು. ಸರ್ವಸ್ವವನ್ನೂ ಅಲ್ಲಾಹನಿಗೆ ಅರ್ಪಿಸುವಂತೆ (ತವಕ್ಕುಲ್) ಪ್ರೇರೇಪಿಸುತ್ತಲಿದ್ದರು. ಪ್ರಥಮವಾಗಿ ಪ್ರವಾದಿಯವರನ್ನು ಅವರೇ ಸಮಾಧಾನ ಪಡಿಸಿದ್ದರು; ಸಂಪೂರ್ಣ ನಿಷ್ಠೆ ಮತ್ತು ಪ್ರೀತಿಯಿಂದ ಧರ್ಮದ ಧ್ವಜವನ್ನು ಎತ್ತಿ ಹಿಡಿದರು. ಅವರ ಧರ್ಮನಿಷ್ಠೆ ಮತ್ತು ಭಕ್ತಿಯು ಮಹಿಳೆಯರಿಗೆ ಮಾತ್ರವಲ್ಲ ಪುರುಷರಿಗೂ ಇಡೀ ಮಾನವ ಜಗತ್ತಿಗೂ ಅಭಿಮಾನಾರ್ಹವಾಗಿದೆ. ಅವರು ತಮ್ಮ ತನುಮನ ಧನವನ್ನು ಇಸ್ಲಾಮಿಗೆ ಸಮರ್ಪಿಸಿದರು. ಅವರ ಮರಣದಿಂದ ಪ್ರವಾದಿಯವರಿಗೆ(ಸ) ತೀವ್ರ ದುಃಖವಾಯಿತು. ಅವರ ಪ್ರಿಯ ಪತ್ನಿಯ ಅಗಲಿಕೆಗಾಗಿಯಲ್ಲ. ಧರ್ಮದ ಅತ್ಯಧಿಕ ಸೇವೆ ಮಾಡಿದ ಮಹಾ ಮಹಿಳೆ ಇಹಲೋಕ ತೊರೆದುದಕ್ಕಾಗಿ!

ಸತ್ಯದ ಸೇವಕರು ಹಲವು ಕಠಿಣ ಪರಿಸ್ಥಿತಿಗಳನ್ನು ಎದುರಿಸಬೇಕಾಯಿತು. ಅವರನ್ನು ಕ್ರೂರ ಹಿಂಸೆ-ದೌರ್ಜನ್ಯಗಳಿಗೆ ಗುರಿಪಡಿಸಲಾಗಿತ್ತು. ಅವರನ್ನು ಚೂಪಾದ ಮುಳ್ಳುಗಳ ಮೇಲೆ ಮಲಗಿಸಿ ಎಳೆಯಲಾಗಿತ್ತು. ಸುಡು ಮರಳಿನಲ್ಲಿ ಮಲಗಿಸಲಾಗಿತ್ತು. ಕಾಯಿಸಿದ ಕಬ್ಬಿಣದ ಸರಳುಗಳಿಂದ ಸುಡಲಾಗಿತ್ತು. ಹೇಯವಾಗಿ ಪೀಡಿಸಲಾಗಿತ್ತು. ಈ ಎಲ್ಲ ವಿಪತ್ತುಗಳನ್ನು ಪುರುಷರಂತೆಯೇ ಸ್ತ್ರೀಯರೂ ಸಹಿಸಿದ್ದರು. ಮಾತ್ರವಲ್ಲ, ಸಂಕಷ್ಟ ಮತ್ತು ಮರ್ದನಗಳನ್ನು ಸಹಿಸುವ ನಿಟ್ಟಿನಲ್ಲಿ ಮಹಿಳೆಯರು ಪುರುಷರಿಗಿಂತ ಉತ್ತಮ ಮಾದರಿಯನ್ನು ತೋರಿಸಿದ್ದರು. ಆದರೆ, ಅವರೆಲ್ಲರೂ ಸುದೃಢ ಸತ್ಯವಿಶ್ವಾಸವಿದ್ದ ಮಹಿಳಾರತ್ನಗಳಾಗಿದ್ದರು. ಯಾವ ಕುತಂತ್ರಗಳಿಗೂ ಬಲಿ ಬೀಳದ ಸತ್ಯವಿಶ್ವಾಸಿನಿಯರು! ಮಕ್ಕಾ ನಗರವು ಸತ್ಯವಿಶ್ವಾಸಿನಿಗಳಿಗೆ ಸಂಪೂರ್ಣ ಪ್ರತಿಕೂಲವಾಗಿ, ಕುರೈಶರು ಅಲ್ಲಾಹನ ಭೂಮಿಯನ್ನು ಮುಸ್ಲಿಮರಿಗೆ ಜಟಿಲಗೊಳಿಸಿದಾಗ ಅವರು ಅಬಿಸೀನಿಯಾಕ್ಕೆ ವಲಸೆ ಹೋಗಬೇಕಾಯಿತು. ಈ ವಲಸೆಯಲ್ಲಿಯೂ ಮಹಿಳೆಯರು ಭಾಗಿಯಾಗಿದ್ದರು. ತರುವಾಯ ಮದೀನಾಕ್ಕೆ ವಲಸೆ ಹೋಗುವ ಹಂತ ಬಂತು. ಆ ಸಂದರ್ಭದಲ್ಲಿಯೂ ಪುರುಷರು ಊರು, ಮನೆಮಾರು, ಸೊತ್ತು ವಿತ್ತ, ಬಂಧು ಮಿತ್ರಾದಿಗಳನ್ನು ತೊರೆದಂತೆಯೇ ಮಹಿಳೆಯರೂ ತಮ್ಮ ಸಕಲ ಸಂಬಂಧಗಳನ್ನು ತ್ಯಜಿಸಿ ಸತ್ಯಧರ್ಮಕ್ಕೆ ಸೇರಿದರು. ಇಸ್ಲಾಮೀ ಇತಿಹಾಸದ ಎಲ್ಲ ಪರೀಕ್ಷಾ ಹಂತಗಳಲ್ಲಿಯೂ ಮಹಿಳೆಯರು, ತ್ಯಾಗ, ಧೈರ್ಯ, ತಾಳ್ಮೆ, ಧಾರ್ಮಿಕ ಪ್ರೇಮ-ಗೌರವಗಳ ಉಜ್ವಲ ಮಾದರಿಗಳನ್ನು ಸೃಷ್ಟಿಸಿದ್ದಾರೆ. ಆ ಸುದೀರ್ಘ ಕಥೆಗಳನ್ನು ಇಲ್ಲಿ ವಿವರಿಸುವ ಅವಕಾಶವಿಲ್ಲ. ನನ್ನ ಮಾತಿನ ಒಟ್ಟು ಸಾರಾಂಶವಿಷ್ಟೇ- ಇಸ್ಲಾಮೀ ಸಂದೇಶ ಪ್ರಚಾರವು ಪುರುಷರಂತೆಯೇ ಸ್ತ್ರೀಯರಿಗೂ ಅನ್ವಯವಾಗುತ್ತದೆ. 'ಇಕಾಮತುದ್ದೀನ್'(ಧರ್ಮ ಸಂಸ್ಥಾಪನೆ) ಎಂಬ ಹೊಣೆಗಾರಿಕೆಯಲ್ಲಿ ಉಭಯತ್ರರೂ ಸಹಭಾಗಿಗಳೆಂಬ ನಂಬಿಕೆ ಹೃದಯದಲ್ಲಿ ದೃಢವಾಗಿದ್ದ ತನಕ ಮಹಿಳೆಯರೂ ಸತ್ಯಮಾರ್ಗದ ವೀರಯೋಧರಲ್ಲಿ ಸೇರಿದ್ದರು. ಧರ್ಮದ ಹಾದಿಯಲ್ಲಿ ಅವರು ಹೊರೆಯಾಗಿರಲಿಲ್ಲ. ಅರಬ್ ಸಮುದಾಯದಲ್ಲಿ ಅಬಲೆಯರ ಸ್ಥಿತಿ ಬಹಳ ಶೋಚನೀಯವಾಗಿತ್ತು. ಆದ್ದರಿಂದ ಇಸ್ಲಾಮಿನ ವೈರಿಗಳಿಗೆ ಮಹಿಳೆಯರನ್ನು ಪೀಡಿಸುವುದು ಸುಲಭವಾಗಿತ್ತು, ಆದರೆ, ಈ ಎಲ್ಲ

ಹಿಂಸೆಗಳನ್ನು ಮಹಿಳೆಯರು ಸಹಿಸಿದರು. ಸತ್ಯಧರ್ಮ ಮತ್ತು ಪ್ರವಾದಿಯವರೊಂದಿಗಿನ ಪ್ರೀತ್ಯಾದರಗಳಿಂದ ಮಹಿಳೆಯರು ಹೊಂದಿದ್ದ ಮಹಾನ್ ಪರಂಪರೆಗಳ ಬಗ್ಗೆ ಆಲಿಸುವಾಗ ಧಾರ್ಮಿಕ ಸ್ಫೂರ್ತಿಯು ಉಕ್ಕೇರುತ್ತದೆ. ಉಹುದ್ ಯುದ್ಧದಲ್ಲಿ ಪ್ರವಾದಿ(ಸ) ಮತ್ತು ಅವರ ಅನೇಕ ಅನುಯಾಯಿಗಳಿಗೆ, ಘೋರ ಪರಿಸ್ಥಿತಿಗಳನ್ನು ಎದುರಿಸಬೇಕಾಯಿತು. ಈ ಯುದ್ಧದಲ್ಲಿ ಇತರ ಹಲವು ಅಹಿತಕರ ಘಟನೆಗಳೊಂದಿಗೆ ಪ್ರವಾದಿಯವರು 'ಹುತಾತ್ಮ'ರಾದರೆಂಬ ವದಂತಿಯೂ ಹಬ್ಬಿತ್ತು. ಈ ಸುದ್ದಿ ಮದೀನಾಕ್ಕೆ ತಲಪಿದ ಕೂಡಲೇ ಓರ್ವ ಅನ್ಸಾರಿ ಮಹಿಳೆಯು ಮನೆಯಿಂದ ಹೊರಡುತ್ತಾರೆ. ಸತ್ಯಧರ್ಮವನ್ನು ತಿಳಿಯುವುದಕ್ಕೆ ಏಕೈಕ ಮೂಲವಾಗಿರುವ ಮಹಾತ್ಮರು, ಪ್ರವಾದಿಯವರು ಆಕ್ರಮಣಕ್ಕೆ ಬಲಿಯಾದುದು ನಿಜವೇ? ಅದು ಅವರಿಗೆ ತಿಳಿಯಬೇಕಾಗಿತ್ತು. ಮದೀನಾದಿಂದ ಅವರು ನೇರವಾಗಿ ಯುದ್ಧ ರಂಗಕ್ಕೆ ತೆರಳಿದರು. ಉಹುದ್‌ನಿಂದ ಮರಳಿ ಬರುತ್ತಿರುವವರೊಡನೆ ಅವರು ಪ್ರವಾದಿಯವರ ಸ್ಥಿತಿಯನ್ನು ವಿಚಾರಿಸಿದರು. ಕೆಲವರು ಅವರಿಗೆ ವ್ಯಥೆಯ ಬೇರೊಂದು ವೃತ್ತಾಂತವನ್ನು ತಿಳಿಸಿದರು. ಆ ಮಹಿಳಾಮಣಿಯ ಆದರಣೀಯ ತಂದೆ, ಪ್ರೀತಿಯ ಪತಿ, ಯುವಕರಾದ ಮೂವರು ಪುತ್ರರೂ- ಯುದ್ಧ ರಂಗದಲ್ಲಿ ಹುತಾತ್ಮರಾಗಿದ್ದಾರೆ! ಅಕಟಾ! ಎಂತಹ ಅಸಹನೀಯ ದುಃಖ ವಾರ್ತೆಗಳು! ಇದರಲ್ಲಿ ಯಾವುದಾದರೊಂದು ಘಟನೆ ಸಂಭವಿಸಿದರೂ ಮಹಿಳೆಯರ ಹೃದಯ ಒಡೆಯಬಹುದು. ಅವರಿಗೆ ಆಶ್ರಯ ಮತ್ತು ಆಸರೆಯಾಗಿದ್ದ ಆಪ್ತೇಷ್ಟರೆಲ್ಲರೂ ಒಬ್ಬೊಬ್ಬರಾಗಿ ಇಹಲೋಕ ತ್ಯಜಿಸಿದ್ದರು. ಆದರೆ ಆ ವೀರಮಹಿಳೆಯ ಧರ್ಮಪ್ರೇಮವನ್ನು ನೋಡಿರಿ. ಅವರು ಹೀಗೆಂದರು: ತಂದೆ, ಪತಿ ಮತ್ತು ಪುತ್ರರ ವಿಷಯ ನಾನು ಕೇಳಿಲ್ಲ, ಪ್ರವಾದಿಯವರಿಗೆ ಏನಾಗಿದೆ ಹೇಳಿ! 'ಅಲ್ಲಾಹನ ಅನುಗ್ರಹದಿಂದ ಪ್ರವಾದಿಯವರಿಗೆ ಯಾವ ಅಪಾಯವೂ ಆಗಿಲ್ಲ'. ಆಗಂತುಕ ಶುಭ ಸುದ್ದಿ ತಿಳಿಸಿದ. 'ಇಲ್ಲ, ಪ್ರವಾದಿಯವರನ್ನು ಕಣ್ಣಾರೆ ನೋಡದೆ ನಾನು ಒಪ್ಪಲಾರೆ' ಎಂದು ಅವರು ಹೇಳಿದರು. ಪ್ರವಾದಿಯವರು ಸುರಕ್ಷಿತರಾಗಿರುವುದನ್ನು ನೋಡಿ ಆ ಮುಸ್ಲಿಮ್ ಮಹಿಳೆ ಹೀಗೆಂದರು: "ಪ್ರಿಯ ಪ್ರವಾದಿಗಳೇ! ನೀವು ಬದುಕಿದ್ದರೆ ಎಲ್ಲಾ ವಿಪತ್ತುಗಳೂ ತುಚ್ಛ". ಇಲ್ಲಿ ಕೇವಲ ಒಂದು ಉದಾಹರಣೆಯನ್ನಷ್ಟೆ ನಾನು ಹೇಳಿದ್ದೇನೆ. ಮಹಿಳೆಯರ ವೀರಗಾಥೆ ಬಹಳಷ್ಟು ಉಜ್ವಲವಾಗಿದೆ. ಇಸ್ಲಾಮಿನ ಪ್ರತಿಯೊಂದು ಕಾಲಘಟ್ಟವೂ ಇಂಥ ಘಟನೆಗಳಿಂದ ತುಂಬಿದೆ. ಇಸ್ಲಾಮಿನ ಇತಿಹಾಸದಲ್ಲಿ ಪುರುಷರ ವಿಶ್ವಾಸದ ಸ್ಫೂರ್ತಿಯು ದುರ್ಬಲವಾದ ಹಂತಗಳಲ್ಲಿಯೂ ಪ್ರತಿಯೊಬ್ಬ ಮುಸ್ಲಿಮನೂ ಹೆಮ್ಮೆ ಪಡಬಹುದಾದಂಥ ಮಹಿಳಾರತ್ನಗಳಿದ್ದರು.

ಇಸ್ಲಾಮಿನ ಆರಂಭ ಕಾಲದ ಯುದ್ಧಗಳಲ್ಲಿ ಪುರುಷರು ಬಾಣ, ಕಠಾರಿ ಧರಿಸಿ ಕಾದಾಡಿ ಗಾಯಾಳುಗಳಾದರೆ, ಗಾಯಗೊಂಡವರಿಗೆ ನೀರು ಸರಬರಾಜು, ಶುಶ್ರೂಷೆ, ಸಾಂತ್ವನದ ಸೇವೆಯನ್ನು ಮಹಿಳೆಯರು ನಿರ್ವಹಿಸಿದ್ದರು. ತಮ್ಮ ಹಣ ಮತ್ತು ಆಭರಣಗಳಿಂದ ಅವರು ಸತ್ಯಧರ್ಮಕ್ಕೆ ನೆರವಾಗಿದ್ದರು. ಪ್ರವಾದಿಯವರ ಹೆಸರು ಹೇಳುವವರೂ ಕಡಿಮೆಯಿದ್ದ ಕಾಲದಲ್ಲಿ ಬಾಲೆಯರು ಪ್ರವಾದಿಯವರನ್ನು ಹೊಗಳಿ ಹಾಡಿದರು. 'ಮಕ್ಕಳೇ! ನೀವು ನನ್ನನ್ನು ಪ್ರೀತಿಸುತ್ತಿರುವಿರಾ?' ಪ್ರವಾದಿಯವರು ಅವರೊಡನೆ ವಿಚಾರಿಸಿದರು. ಮಕ್ಕಳ ಉತ್ತರ 'ಹೌದು,

ಖಂಡಿತವಾಗಿಯೂ'. ಪ್ರವಾದಿಯವರು ಪ್ರತ್ಯುತ್ತರಿಸಿದರು, 'ನಾನೂ ನಿಮ್ಮನ್ನು ಪ್ರೀತಿಸುತ್ತೇನೆ.' ಪುರುಷರಲ್ಲಿ ಯಾರಿಗಾದರೂ ಈ ಗೌರವ ದೊರೆತಿದೆಯೇ?

ಇದು ಸ್ತ್ರೀ-ಪುರುಷರೆಲ್ಲರೂ ಸಮಾನವಾಗಿ ಧರ್ಮದ ವಕ್ತಾರರು ಮತ್ತು ಹೊಣೆಗಾರರೆಂದು ಸ್ತ್ರೀಯರು ಅರಿತಿದ್ದ ಕಾಲದ ಕಥೆಗಳಾಗಿವೆ. ಆ ಕಾಲದಲ್ಲಿ ಸತ್ಯಮಾರ್ಗಕ್ಕೆ ಅಡ್ಡಿಯಾಗಿದ್ದ ಎಲ್ಲವನ್ನೂ ಎಷ್ಟು ಪ್ರಿಯವಾಗಿದ್ದರೂ ಅವರು ತೊರೆದರು. ಪ್ರೀತಿಯ ಪತಿಗೆ ಸತ್ಯಧರ್ಮದ ಸಂಬಂಧವಿಲ್ಲವೆಂಬ ಕಾರಣಕ್ಕಾಗಿ ಪತ್ನಿಯು ದ್ವೇಷಿಸಿದಳು. ದಟ್ಟ ದರಿದ್ರನಾದ ಪತಿ, ಆತನಿಗೆ ಸತ್ಯಧರ್ಮದಲ್ಲಿ ಪ್ರೀತಿಯಿದೆಯೆಂಬ ಕಾರಣಕ್ಕಾಗಿ ಅವಳ ಪ್ರೀತಿಗೆ ಪಾತ್ರನಾದನು. ಈ ವಿಷಯದಲ್ಲಿ ಮಹಿಳೆಯರು ಒಮ್ಮೆಯೂ ಭೀರುತನ ತೋರಿಸಲಿಲ್ಲ. ಸತ್ಯ ಧರ್ಮದಿಂದ ದೂರ ಸರಿದ ಪತಿಯಿಂದ ಮುಸ್ಲಿಮ್ ಮಹಿಳೆಯೂ ದೂರ ಸರಿದಳು. ಧರ್ಮದ ಹೆಸರಲ್ಲಿ ಮಕ್ಕಳೊಂದಿಗಿನ ಸಂಬಂಧವನ್ನು ಕಡಿದುಕೊಂಡರು.

ಮಹಿಳೆಯರ ಹೃದಯದಲ್ಲಿ ಇಸ್ಲಾಮಿನ ಪ್ರಭಾವವು ಅಷ್ಟೊಂದು ಗಾಢವಾಗಿತ್ತು. ಅವರ ದ್ವೇಷ ಮತ್ತು ಪ್ರೀತಿಯೆಲ್ಲವೂ ಅಲ್ಲಾಹನಿಗೆ ಮೀಸಲಾಗಿತ್ತು. ತಾಯಂದಿರಲ್ಲಿ ತಮ್ಮ ಮಕ್ಕಳು ಶ್ರೀಮಂತರಾಗಬೇಕೆಂಬ ಬಯಕೆಗಿಂತ ಹೆಚ್ಚಾಗಿ ಅವರಲ್ಲಿ ಅಲ್ಲಾಹನ ಅನುಸರಣೆಯ ಸ್ಫೂರ್ತಿ ತುಂಬಿರಬೇಕೆಂಬುದೇ ಮುಖ್ಯವಾಗಿತ್ತು. ಹಾಗೆಯೇ ಪತಿಯಂದಿರು ಸತ್ಯವಿಶ್ವಾಸಿ ಮತ್ತು ಪ್ರವಾದಿಯವರ ಸಂಗಡಿಗನಾಗಿರದೆ ಅದೆಂಥ ತ್ಯಾಗಗಳನ್ನು ಮಾಡಿದರೂ ಪತ್ನಿಯರ ದೃಷ್ಟಿಯಲ್ಲಿ ನಗಣ್ಯವಾಗಿತ್ತು. ಇದು ನಮಗೂ ಸತ್ಯಧರ್ಮದ ಸಂಸ್ಥಾಪನೆಯ ಹೊಣೆಗಾರಿಕೆಯಿದೆಯೆಂದು ಮಹಿಳೆಯರು ಮನಗಂಡಿದ್ದ ಉತ್ತಮ ಕಾಲದ ಕಥೆಗಳಾಗಿವೆ.

ಆದರೆ, ಇಂದಿನ ಪರಿಸ್ಥಿತಿ-ಎಲ್ಲವೂ ಅಡಿಮೇಲಾಗಿದೆ. ಖರ್ಚುವೆಚ್ಚ ನಿರ್ವಹಣೆಯಂತೆಯೇ ಧರ್ಮಸೇವೆಯ ಹೊಣೆಯೂ ಪುರುಷನಿಗೆ ಮೀಸಲಾಗಿದೆಯೆಂದು ಭಾವಿಸಲಾಗುತ್ತಿದೆ. ಅಲ್ಲಾಹನ ಶರೀಅತ್ ನಮ್ಮನ್ನೂ ನೇರವಾಗಿ ಅಭಿಸಂಬೋಧಿಸುತ್ತಿದೆಯೆಂದು ಗ್ರಹಿಸದಿರುವುದೇ ಮಹಿಳೆಯರ ಮೊದಲ ತಪ್ಪು. ಪ್ರವಾದಿಯವರು ಸ್ತ್ರೀ-ಪುರುಷರಿಗೆ ಸಮಾನವಾಗಿ ಸಂದೇಶ ಪ್ರಚಾರ ಮಾಡಿದ್ದಾರೆ. ಹಾಗಿಲ್ಲವೆಂಬ ತಪ್ಪು ತಿಳುವಳಿಕೆಯು ನಮ್ಮ ಇಸ್ಲಾಮೀ ಜೀವನವನ್ನು ಸಂಪೂರ್ಣ ಅಡಿಮೇಲುಗೊಳಿಸಿದೆ. ಇಂದು ಮಹಿಳೆಯರು ಸಮುದಾಯದಲ್ಲಿರುವ ಎಲ್ಲ ಕಂದಾಚಾರ ಮತ್ತು ಸಂಪ್ರದಾಯಗಳನ್ನು ತಮ್ಮ ಮೂಲಕ ತಮ್ಮ ಮಕ್ಕಳಿಗೂ ಪತಿಯಂದಿರಿಗೂ ಹರಡಿಸುವ ಸಾಧನವಾದಂತಿದೆ. ಅವರಿಗೆ ಒಪ್ಪಿಗೆಯಿದ್ದರೆ ನಾನು ಇನ್ನೂ ಸ್ವಲ್ಪ ಸ್ಪಷ್ಟವಾಗಿ ಹೇಳಿ ಬಿಡುತ್ತೇನೆ. ಈ ಪೈಶಾಚಿಕ ಕಾಲದಲ್ಲಿ ಮಹಿಳೆಯರು ಪಿಶಾಚಿಯ ದಲ್ಲಾಳಿಗಳಾಗಿ ಬಿಟ್ಟಿದ್ದಾರೆ. ಸಮುದಾಯದಲ್ಲಿ ವ್ಯಾಪಿಸಿರುವ ಎಲ್ಲ ನೈತಿಕ ಪಿಡುಗುಗಳೂ ನೀಚ ಕೃತ್ಯಗಳೂ ಬಹಳ ಹೇಯ ರೂಪದಲ್ಲಿ ಮಹಿಳೆಯರ ಮೇಲೆ ಪ್ರಭಾವ ಬೀರಿವೆ. ಹೀಗೆ ಅವು ಅವರಿಂದ ಅವರ ಸಂತಾನಗಳಿಗೂ ತಲೆಮಾರುಗಳಿಗೂ ವ್ಯಾಪಿಸುತ್ತಿವೆ.

ಕೆಲವೆಡೆಗಳಲ್ಲಿ ಸ್ಥಿತಿ ಸ್ವಲ್ಪ ಉತ್ತಮವಾಗಿರಬಹುದಾದರೂ ಸಾಮಾನ್ಯ ಸ್ಥಿತಿ ಹಾಗಿದೆ. ಮಹಿಳೆಯು ಕೆಟ್ಟರೆ ಸಂತಾನಗಳ ಮನಸ್ಸು, ಗುಣನಡತೆ ಅದೇ ಪ್ರಕಾರ ಕೆಡುತ್ತದೆ. ಮಾತೆಯು ಮಗುವಿಗೆ ಮೊಲೆ ಹಾಲೂಡಿಸುವಾಗ ಮಗುವಿಗೆ ನರನಾಡಿಗಳ ಮೂಲಕ-ಆಕೆಯ ಗುಣನಡತೆಗಳ

ವಿಶ್ವಾಸದ ಚೈತನ್ಯ ನಿರ್ಜೀವವಾಗಿದ್ದರೆ- ವಿಷಬಾಧಿತ ತಾಯಿಯ ಮೊಲೆಹಾಲು ಕುಡಿದುದಕ್ಕಿಂತ ಹೆಚ್ಚು ವಿಷಾಣುಗಳು ಆ ಮೂಲಕ ಮಗುವಿಗೆ ಹರಡುವುದು.

ನಮ್ಮ ತಾಯಂದಿರೇ ಇಸ್ಲಾಮಿನ ಸರಿಯಾದ ಶಿಕ್ಷಣ ಶೀಲಗಳ ನೈಜ ಮೂಲ ಮತ್ತು ಮಾರ್ಗವಾಗಿದ್ದಾರೆ. ತಾಯಂದಿರು ಅಸ್ಮಾ(ರ) ಮಾದರಿಯನ್ನು ಅವಲಂಬಿಸದಿದ್ದರೆ ಅಬ್ದುಲ್ಲಾ ಬಿನ್ ಝುಬೈರ್‌ರಂಥ ವೀರರು ಹುಟ್ಟುವುದು ಹೇಗೆ? ಸನ್ಮಾರ್ಗಕ್ಕಾಗಿ ಗಲ್ಲಿಗೇರಿಸಿದ ಪುತ್ರನನ್ನು ನೋಡಿ, 'ಓಹೋ, ಈ ಪಯಣಿಗನಿಗೆ ವಾಹನದಿಂದ ಇಳಿಯಲು ಇನ್ನೂ ಸಮಯವಾಗಿಲ್ಲವೇ?' ಎಂದು ಉದ್ಗರಿಸುವ ತಾಯಂದಿರಿಲ್ಲದಿದ್ದರೆ, ಸೆರೆಮನೆ ಮತ್ತು ಗಲ್ಲುಗಳನ್ನು ಕಂಡಾಗ ಮುಗುಳ್ನಗುವ ಪುತ್ರರು ಯಾರ ಗರ್ಭದಲ್ಲಿ ಹುಟ್ಟಿಯಾರು? ಆ ಮಹಾ ಮಹಿಳೆಯು ಕಣ್ಣಿನ ದೃಷ್ಟಿಯನ್ನು ಕಳಕೊಂಡ ಕಾಲದಲ್ಲಿ ಅವರನ್ನು ಪರೀಕ್ಷಿಸಲಿಕ್ಕಾಗಿ ಪುತ್ರ ಹೀಗೆ ಪ್ರಶ್ನಿಸುತ್ತಾನೆ, 'ಅಮ್ಮಾ, ನಾನು ನನ್ನನ್ನು ವೈರಿಗಳಿಗೆ ಅರ್ಪಿಸಬೇಕೇ! ಅಥವಾ ಅವರೊಡನೆ ಕ್ಷಮೆ ಯಾಚಿಸಬೇಕೇ? ಆ ವೀರ ಮಹಿಳೆಯು ತನ್ನ ದುರ್ಬಲ ಹಸ್ತಗಳಿಂದ ಮಗನ ಮೈದಡವಿ, 'ನೀನು ಏನನ್ನು ಧರಿಸಿರುವೆ?' ಎಂದು ಕೇಳುತ್ತಾರೆ.

ಪುತ್ರ: 'ಯುದ್ಧ ಕವಚ'.

ಮಾತೆ: ಸನ್ಮಾರ್ಗದ ಯೋಧನಿಗೆ ಇಂತಹ ರಕ್ಷಣೆಯ ಅಗತ್ಯವಿಲ್ಲ. ಅದನ್ನು ಕಳಚಿ ಬಿಡು. ಸನ್ಮಾರ್ಗದಲ್ಲಿ ಎದೆಯೊಡ್ಡಿ ಕಾದಾಡು. ನಾಳೆ ನಿನ್ನ ಬಗ್ಗೆ ವೈರಿಗಳು ಗೇಲಿ ಮಾಡುವುದಕ್ಕೆ ಆಸ್ಪದ ನೀಡ ಬೇಡ!

ಕೇವಲ ಒಂದೇ ಕೈಯಿಂದ ಸತ್ಯಧರ್ಮವನ್ನು ಕಟ್ಟಿ ಬೆಳೆಸಲು ನಮ್ಮಿಂದ ಸಾಧ್ಯವಿಲ್ಲ. ಇನ್ನೊಂದು ಕೈಯ-ಮಹಿಳೆಯರ-ಸಹಕಾರದ ಅಗತ್ಯವೂ ಇದೆ. ಮಾತೆಯ ಮಡಿಲಲ್ಲಿ ಮಕ್ಕಳ ಮೊದಲ ತರಬೇತಿ ಶಾಲೆಯಿದೆ. ಮಾತೆಯ ಪ್ರತಿಯೊಂದು ಮೊಲೆಹಾಲಿನ ಹನಿಯಿಂದ ಮಗುವು ಆಕೆಯ ಮನೋಭಾವ, ಗುಣನಡತೆಗಳನ್ನು ಹೀರುತ್ತದೆ. ತಾಯಿಯ ಪ್ರತಿಯೊಂದು ಕ್ರಿಯೆ, ನಿಷ್ಕ್ರಿಯೆಗಳಿಂದ ಮಗುವೂ ತನ್ನ ಕಾರ್ಯ ವೈಖರಿಯನ್ನು ಕಲಿಯುತ್ತದೆ. ತಾಯಿಯು ಮುಸ್ಲಿಮ್ ಮತ್ತು ಸತ್ಯವಿಶ್ವಾಸಿನಿ(ಮೂಮಿನಾತ್) ಆಗಿದ್ದರೆ ಮಗುವೂ ಮುಸ್ಲಿಮ್ ಮತ್ತು ಸತ್ಯವಿಶ್ವಾಸಿ(ಮೂಮಿನ್) ಆಗುವುದು. ತಾಯಿಯಲ್ಲಿ ಈಮಾನ್(ವಿಶ್ವಾಸ) ಮತ್ತು ಇಸ್ಲಾಮಿನ ಚೇತನವಿಲ್ಲದಿದ್ದರೆ ಮಕ್ಕಳಲ್ಲಿಯೂ ಇಸ್ಲಾಮ್ ಮತ್ತು ಈಮಾನ್ ಇರಲಾರದು. ಮಕ್ಕಳು ಇತರ ಯಾವುದೇ ಪ್ರಭಾವಗಳಿಂದ ಮುಕ್ತರಾದರೂ ತಾಯಂದಿರ ಒಳ್ಳೆಯ ಯಾ ಕೆಟ್ಟ ಪ್ರಭಾವದಿಂದ ಮುಕ್ತರಾಗಲು ಸಾಧ್ಯವಿಲ್ಲ.

ಮಕ್ಕಳ ಮಟ್ಟಿಗೆ, ಪುರುಷರ ಕೆಡುಕುಗಳ ದುಷ್ಪರಿಣಾಮಗಳೂ ಅಪಾಯಕಾರಿಯಾಗಿವೆ. ಹಾಗಿದ್ದರೂ ಆ ದೋಷದಿಂದ ಅವರನ್ನು ಮುಕ್ತಗೊಳಿಸುವ ಹಾದಿ ಗೋಚರಿಸಬಹುದು. ಆದರೆ ಮಹಿಳೆಯರ ದೋಷಗಳ ದುಷ್ಪರಿಣಾಮಗಳಿಂದ ಮಕ್ಕಳನ್ನು ಪಾರುಗೊಳಿಸಲು ಸಾಧ್ಯವಿಲ್ಲ. ಅವರಲ್ಲಿ ಮೂಲಭೂತ ದೋಷ ಕಾಣಿಸಿಕೊಳ್ಳುತ್ತದೆ. ಅದು ಕಾಂಡ ಮತ್ತು ರೆಂಬೆಗಳ ಬದಲಾಗಿ ಬೇರನ್ನು ಪೀಡಿಸುತ್ತದೆ. ಅದಕ್ಕೆ ಪರಿಹಾರವಿಲ್ಲ. ಈ ಹಿನ್ನೆಲೆಯಲ್ಲಿ ಮಹಿಳೆಯರಿಗೆ ಘನ ಜವಾಬ್ದಾರಿಕೆಯಿದೆ. ಅವರು ಮಕ್ಕಳಿಗೆ ಚುಚ್ಚುವ ರೋಗಗಳನ್ನು ಮಹಾ

ತಜ್ಞ ವೈದ್ಯನಿಂದಲೂ ಗುಣಪಡಿಸಲು ಸಾಧ್ಯವಿಲ್ಲ. ಬೆಳವಣಿಗೆಯ ಪ್ರಾರಂಭ ದಿಸೆಯಲ್ಲಿ ರೋಗ ಪೀಡಿತವಾಗುವ ಗಿಡವು ಒಳ್ಳೆಯ ಮರವಾಗಲು ಕಷ್ಟವಿದೆ. ಒಟ್ಟಿನಲ್ಲಿ, ಇಂದು ಧರ್ಮದ ಉದ್ಧಾರಕ್ಕಾಗಿ ಎದ್ದು ನಿಂತಿರುವ ನಮಗೆ ಸಹಾಯ-ಸಹಕಾರ ನೀಡುವ ಕರ್ತವ್ಯ ಮಹಿಳೆಯರಿಗಿದೆ. ಮಾತೆಯರು ಮತ್ತು ಮಹಿಳೆಯರೊಡನೆ ನಾನು ಅಲ್ಲಾಹನ ಹೆಸರಲ್ಲಿ ವಿನಂತಿಸುತ್ತಿದ್ದೇನೆ-ಅವರು ಆಲಸ್ಯವನ್ನು ತೊರೆದು ತಮ್ಮ ಕರ್ತವ್ಯಗಳನ್ನು ಅರಿಯಬೇಕು. ಅಲ್ಲಾಹನ ಧರ್ಮವೇನು? ಅಲ್ಲಾಹ್ ಮತ್ತು ಪ್ರವಾದಿಯವರ ಆದೇಶಗಳೇನು? ಎಂಬುದನ್ನು ತಿಳಿಯುವುದು ಮಹಿಳೆಯರ ಕರ್ತವ್ಯವಾಗಿದೆ. ಪ್ರತಿಯೋರ್ವ ತಾಯಿ, ಸಹೋದರಿ, ಪುತ್ರಿ, ಪತ್ನಿಯ ಕರ್ತವ್ಯವಾಗಿದೆ. ಅವರಿಗೆ ಇನ್ನೊಂದು ಹೊಣೆಗಾರಿಕೆಯೂ ಇದೆ. ತಮ್ಮ ಗರ್ಭದಲ್ಲಿ ಹುಟ್ಟುವ ಮಕ್ಕಳಿಗೆ ಮೊಲೆಯೂಡಿಸುವುದರೊಂದಿಗೆ ತಮ್ಮ ಸತ್ಕರ್ಮ ಮತ್ತು ಉತ್ತಮ ದಿನಚರಿಗಳಿಂದ ಅವರಲ್ಲಿ ಧಾರ್ಮಿಕ ನೆಲೆಗಟ್ಟು, ಪ್ರವಾದಿಯವರ ಶಿಕ್ಷಣ ಶೀಲಗಳನ್ನು ಸುದೃಢಗೊಳಿಸಬೇಕಾದುದೂ ಮಹಿಳೆಯರ ಕರ್ತವ್ಯವಾಗಿದೆ. ತಮ್ಮ ಪ್ರಯತ್ನಗಳ ಫಲಿತಾಂಶಗಳ ಬಗ್ಗೆ ಅವರು ನಿರಾಶರಾಗಬಾರದು. ಅವರ ಸ್ಥಾನವು ಬಹಳ ಉನ್ನತವಾಗಿದೆ. ಅವರ ಮಾತುಗಳು ನಿಷ್ಫಲವಾಗುವುದಿಲ್ಲ. ಅವರು ಮಕ್ಕಳಿಗೆ ಅನುಕ್ರಮವಾಗಿ ಉಪದೇಶಗಳನ್ನು ನೀಡುತ್ತಿರಬೇಕು. ತಾಯಿಯ ಆಜ್ಞಾಪಾಲನೆಯು ಸೌಭಾಗ್ಯಭರಿತ ಮಗುವಿನ ಕರ್ತವ್ಯವಾಗಿದೆ.

ಒಬ್ಬರು ಪ್ರವಾದಿಯವರೊಡನೆ ಕೇಳಿದರು:

'ನಾನು ಯಾರ ಸೇವೆ ಮಾಡಬೇಕು?'

ಪ್ರವಾದಿ: ನಿನ್ನ ತಾಯಿಯ ಸೇವೆ ಮಾಡು.

ಪ್ರಶ್ನಾರ್ಥಿಯು ಪುನಃ ಅದೇ ಪ್ರಶ್ನೆ ಕೇಳಿದ. ಪ್ರವಾದಿಯವರ ಉತ್ತರ, 'ನಿನ್ನ ತಾಯಿಯ ಸೇವೆ ಮಾಡು.'

ಪ್ರಶ್ನಾರ್ಥಿಯು ಮೂರನೇ ಬಾರಿ ಅದೇ ಪ್ರಶ್ನೆ ಕೇಳಿದಾಗ ಪ್ರವಾದಿಯವರೂ ಉತ್ತರ ಪುನರಾವರ್ತಿಸಿದರು.

ನಾಲ್ಕನೇ ಬಾರಿ ಪ್ರಶ್ನೆಯನ್ನು ಪುನರಾವರ್ತಿಸಿದಾಗ, 'ನಿನ್ನ ತಂದೆಯ ಸೇವೆ ಮಾಡು' ಎಂದು ಪ್ರವಾದಿ(ಸ) ಉತ್ತರಿಸಿದರು.

ಪತ್ನಿಗೆ ಪತಿಯೊಂದಿಗಿನ ಸಂಬಂಧದಲ್ಲಿ ಸಹಕಾರವೇ ಪ್ರಧಾನವಾಗಿದೆ. ಧಾರ್ಮಿಕವಾಗಿಯೂ ಲೌಕಿಕವಾಗಿಯೂ ಈ ಸಹಕಾರವಿರಬೇಕು. ಕುಟುಂಬ ಜೀವನದಲ್ಲಿ ಪತ್ನಿಯು ಪತಿಗೆ ವಿಧೇಯಳೂ ನಂಬಿಗಸ್ಥಳೂ ಹಿತಾಕಾಂಕ್ಷಿಯಿರುವವಳೂ ಆಗಿರಬೇಕು. ಹಾಗೆಯೇ ಧಾರ್ಮಿಕ ವಿಷಯಗಳಲ್ಲಿಯೂ ಪತಿಗೆ ಹಿತೋಪದೇಶ ನೀಡುವುದು ಅವರ ಕರ್ತವ್ಯವಾಗಿದೆ. ಲೌಕಿಕ ವ್ಯವಹಾರಗಳಲ್ಲಿರುವ ಲೋಪ-ದೋಷಗಳಿಗಿಂತ ಧಾರ್ಮಿಕ ವಿಷಯಗಳಲ್ಲಿರುವ ಅವರ ಭ್ರಷ್ಟತೆಯು ಆಕೆಗೆ ಕಳವಳಕಾರಿಯಾಗಬೇಕು. ಈ ವಿಷಯದಲ್ಲಿ ಎದುರಿಸಬೇಕಾಗುವ ಎಲ್ಲ ಸಂಕಷ್ಟಗಳನ್ನೂ ಸಹನೆಯಿಂದ ನಿವಾರಿಸಬೇಕು. ಪತಿಯ ಪಥಭ್ರಷ್ಟತೆಯನ್ನು ಸರ್ವಥಾ ಸಂತೋಷದಿಂದ ಸಹಿಸಬಾರದು. ಪತಿಯು ಯಾವುದಾದರೂ ಸತ್ಕಾರ್ಯಕ್ಕೆ ಸಿದ್ಧನಾದಾಗ ಕಂದಾಚಾರ- ಸಂಪ್ರದಾಯಗಳ ಹೆಸರಲ್ಲಿ ಪತ್ನಿಯು ಆತನ ಸದುದ್ದೇಶಕ್ಕೆ ಅಡ್ಡಿಯಾಗಬಾರದು.

ಸತ್ಯಧರ್ಮದ ಆಜ್ಞೆಗಳನ್ನು ಆಕೆ ಅರಿತಿರಬೇಕು. ಪತಿಯು ಸನ್ಮಾರ್ಗದಲ್ಲಿ ಚಲಿಸುತ್ತಿರುವರೆಂದು ಮನವರಿಕೆಯಾದರೆ ಆತನಿಗೆ ನೆರವಾಗಬೇಕು. ಆತನಿಗೆ ಸ್ಫೂರ್ತಿ-ಪ್ರೋತ್ಸಾಹ ನೀಡಬೇಕು. ಸುಖ-ದುಃಖಗಳಲ್ಲಿ ಸಮಾನ ಸಹಭಾಗಿಯಾಗುವ ಭರವಸೆ ನೀಡಬೇಕು.

ವಸ್ತುಶಃ ಮಹಿಳೆಯ ಪ್ರೀತಿಭರಿತ ಸಹಕಾರವಿಲ್ಲದೆ ಪುರುಷನಿಗೆ ಸನ್ಮಾರ್ಗದಲ್ಲಿ ಮುನ್ನಡೆಯಲು ಬಹಳ ಕಷ್ಟವಿದೆ. ಈ ರಂಗದಲ್ಲಿ ಪತಿಪತ್ನಿಯರ ಹೊಂದಾಣಿಕೆ ಅಗತ್ಯವಾಗಿದೆ. ಅಲ್ಲಾಹನಿಗೆ ಅದೇ ಅತ್ಯಧಿಕ ಪ್ರಿಯವಾಗಿದೆ. ಧರ್ಮಸೇವೆಯ ಹಾದಿಯಲ್ಲಿ ಪುರುಷನಿಗೆ ಆಸರೆ ಮತ್ತು ಆಧಾರವಾಗಿ, ಪ್ರಸ್ತುತ ಧ್ಯೇಯ ಸಾಧನೆಗಾಗಿ ಸಂಕಷ್ಟಗಳನ್ನು ಸಹಿಸುವ ಮಹಿಳೆಯರು ಮಾತ್ರ 'ಸತ್ಯವಿಶ್ವಾಸಿಗಳ ಮಾತೆ'ಯ ಪಾವನ ಮಾದರಿಯಾಗ ಬಲ್ಲರು. ಈ ಹಾದಿಗೆ ಅಡ್ಡಿಯಾಗುವ ಹತಭಾಗ್ಯ ಹೆಣ್ಣು ಶೈತಾನನ ಗೂಢಚಾರಿಣಿಯಾಗಿದ್ದಾಳೆ!

ನಮ್ಮ ನೈಜ ಸಂಪತ್ತು ಮಹಿಳೆಯರ ಹಸ್ತಗಳಲ್ಲಿವೆ. ಹೌದು, ಮಕ್ಕಳನ್ನು ಅವರಿಗೆ ಒಪ್ಪಿಸಲಾಗಿದೆ. ಅವರು ಮಕ್ಕಳಲ್ಲಿ ಮೂಡಿಸುವ ಚಿತ್ರವು ಎಷ್ಟೇ ಉಜ್ಜಿದರೂ ಸಾಯುವ ತನಕ ಮಾಸಲಾರದು. ಆ ಚಿತ್ರ ಸತ್ಯದ್ದಾಗಿರಲಿ ಯಾ ಅಸತ್ಯದ್ದಾಗಿರಲಿ. ಮಹಿಳೆಯರು ಬಯಸಿದರೆ ಅವರ ಶಿಕ್ಷಣ ತರಬೇತಿಗಳಿಂದ ನಮ್ಮ ಇತಿಹಾಸವನ್ನು ಪುನಃ ಬೆಳಗಿಸುವಂತಹ ಮಹಾತ್ಮರು ಉದಯಿಸಬಹುದು. ಇಂದಿನಂಥ ಮುಸ್ಲಿಮರನ್ನು ಬೆಳೆಸ ಬಯಸಿದರೆ ಅದೂ ಅವರಿಗೆ ಸಾಧ್ಯವಿದೆ. ಸ್ವಲ್ಪ ಆಲೋಚಿಸಿ ನೋಡಿರಿ, ಬೆರಳೆಣಿಕೆಯಷ್ಟು ಮಂದಿ ಒಮ್ಮೆ ಜಗತ್ತನ್ನೇ ನಡುಗಿಸಿದ್ದರು. ಆದರೆ ಇಂದಿನ ಖಾನೇಶುಮಾರಿಯಲ್ಲಿ ಮುಸ್ಲಿಮರು ಎಷ್ಟೋಂದು ಅಧಿಕ! ಆದರೆ ಅಂತಹ ಮಂದಿ ಇದ್ದಾರೆಂಬ ಕಥೆಯನ್ನೇ ಭೂಮಿ ಅರಿತಿಲ್ಲ. ಮುಸ್ಲಿಮ್ ಮಹಿಳೆಯರು ಅಸ್ಮಾರಂತೆ(ರ) ಬಾಳಿದರೆ ಮಾತ್ರ ಭೂಮಿಯಲ್ಲಿ ಪ್ರಖ್ಯಾತ ಇಸ್ಲಾಮೀ ಮಕ್ಕಳು ಜನಿಸಬಹುದು. ಅಂದು ಭೂಮಿ ಸಾರಿ ಹೇಳುವುದು, 'ಆಕೆಯ ಮಡಿಲಲ್ಲಿ ಅಲ್ಲಾಹನ ಒಂದು ತಂಡವು ಪಯಣಿಸುತ್ತಿದೆ.' ಈ ಸ್ಥಾನವನ್ನು ಅವರು ಸ್ವೀಕರಿಸದಿದ್ದರೆ ಜಗತ್ತು ಇಂದಿನಂತೆಯೇ ಬದುಕಿ, ಸಾಯುವುದು. ಇಸ್ಲಾಮಿನ ಸ್ವರವೆತ್ತುವವರು ಮಾತ್ರ ಹುಟ್ಟಲಾರರು.

ನನ್ನ ತಾಯಿ ಸಹೋದರಿಯರೊಡನೆ ನಾನು ಪುನಃ ವಿನಂತಿಸುತ್ತಿದ್ದೇನೆ- ನಿಮ್ಮ ಉಜ್ವಲ ಇತಿಹಾಸವನ್ನು ಜ್ಞಾಪಿಸಿರಿ. ಹಾಗೆಯೇ ಬಾಳಲು ಪ್ರಯತ್ನಿಸಿರಿ. ಸತ್ಯಧರ್ಮವನ್ನು ನಮ್ಮಲ್ಲಿಯೂ ಇತರರಲ್ಲಿಯೂ ಸ್ಥಾಪಿಸುವೆವೆಂದು ಅಲ್ಲಾಹನೊಡನೆ ಮಾಡಿರುವ ಪಾವನ ವಾಗ್ದಾನದ ಈಡೇರಿಕೆಗೆ ಸಹಕರಿಸಿರಿ.

ನಾವು ಅಲ್ಲಾಹನೊಡನೆ ಪ್ರಾರ್ಥಿಸೋಣ: ಸ್ತ್ರೀ-ಪುರುಷರಿಗೆ ಸತ್ಕರ್ಮದಲ್ಲಿ ಸಹಕರಿಸಿ ಸೇವೆ ಸಲ್ಲಿಸುವ ಅನುಗ್ರಹವನ್ನು ದಯಪಾಲಿಸಲಿ.

-ಆಮೀನ್

✷✷✷✷

ಮುಸ್ಲಿಮ್ ಮಹಿಳೆ: ಇಸ್ಲಾಮಿನ ಬೇಡಿಕೆಗಳು

ಮೌ| ಸೈಯದ್ ಅಬುಲ್ ಆಲಾ ಮೌದೂದಿ

(ಮಹಿಳಾ ಸಮ್ಮೇಳನವೊಂದರಲ್ಲಿ ಮಾಡಿದ ಭಾಷಣ)

ಮಾತೆಯರೇ! ಸಹೋದರಿಯರೇ! ಮಕ್ಕಳೇ! ಇಂದು ಜಗತ್ತಿನಲ್ಲಿ ಸ್ವತಃ ಮುಸ್ಲಿಮರೆಂದು ವಾದಿಸುವ ಕೋಟಿಗಟ್ಟಲೆ ಮಾನವರನ್ನು ನಾವು ಕಾಣುತ್ತಿದ್ದೇವೆ. ಆದರೆ, ನಾವು ಮುಸ್ಲಿಮ್ ಜಗತ್ತೆಂದು ಕರೆಯುತ್ತಿರುವ ಈ ಜಗತ್ತಿಗೆ ಕೇವಲ ಪ್ರದರ್ಶನಾಲಯದ ಸ್ಥಿತಿಯಿದೆ. ಪ್ರದರ್ಶನಾಲಯದಲ್ಲಿ ವಿವಿಧ ರೀತಿಯ ಶಬ್ದ ಹೊರಡಿಸುವ ನಾನಾ ಜಾತಿಯ ಪ್ರಾಣಿಗಳು ವಾಸವಾಗಿರುತ್ತವೆ. ಆಗಿದ್ದರೂ ಅವುಗಳಿಗೆ ಪರಸ್ಪರ ಒಂದೇ ಪ್ರದರ್ಶನಾಲಯದ ಪ್ರಾಣಿಗಳು ಎಂಬ ಸಂಬಂಧಕ್ಕಿಂತ ಹೆಚ್ಚಿನ ಯಾವ ಸಂಬಂಧವೂ ಇರುವುದಿಲ್ಲ. ಇಂದು ಮುಸ್ಲಿಮ್ ಜಗತ್ತಿನ ಅವಸ್ಥೆಯೂ ಸಾಮಾನ್ಯವಾಗಿ ಹೀಗೆಯೆ ಇದೆ.

ಅದರಲ್ಲಿ ವಿವಿಧ ರೀತಿಯ ಜನರು ವಾಸಿಸುತ್ತಿದ್ದಾರೆ. ಅವರಲ್ಲಿ ಅಲ್ಲಾಹನ ಅಸ್ತಿತ್ವದ ಬಗ್ಗೆ ಸಂಶಯವಿರುವವರಿದ್ದಾರೆ, ದಿವ್ಯವಾಣಿ ಮತ್ತು ಪ್ರವಾದಿತ್ವದ ಬಗ್ಗೆ ಸಂದೇಹವಿರುವವರಿದ್ದಾರೆ. ಪರಲೋಕವನ್ನು ನಿಷೇಧಿಸುವವರು, ಮರಣದ ಬಳಿಕ ಅಲ್ಲಾಹನ ನ್ಯಾಯಾಲಯದಲ್ಲಿ ಹಾಜರಾಗಿ ಐಹಿಕ ಜೀವನದ ಲೆಕ್ಕಾಚಾರವನ್ನು ಸಲ್ಲಿಸ ಬೇಕಾಗಿದೆಯೆಂಬ ಸತ್ಯವನ್ನು ನಿರಾಕರಿಸುವವರಿದ್ದಾರೆ. ಒಳಿತು ಕೆಡುಕುಗಳನ್ನು ಗುರುತಿಸಲು ಇಸ್ಲಾಮ್ ನೀಡಿದ ಜ್ಞಾನವನ್ನು ತಿರಸ್ಕರಿಸಿ ಪ್ರಾಣಿಗಳಂತೆ ಮೈ ಮರೆತು ಜೀವನ ಸಾಗಿಸಬಯಸುವವರಿದ್ದಾರೆ. ಇಸ್ಲಾಮ್ ಕಲಿಸಿದ ಜೀವನ ಮಾರ್ಗ ಸರಿಯಲ್ಲವೆನ್ನುವವರಿದ್ದಾರೆ, ಹಾಗೆಯೇ ತಮ್ಮ ಇಚ್ಛಾನುಸಾರ ಯಾವುದಾದರೊಂದು ಲೌಕಿಕ ಜೀವನ ಮಾರ್ಗದಿಂದ ಸಂತೃಪ್ತರಾಗಿ ಬಾಳುವವರಿದ್ದಾರೆ. ಹೀಗೆ ವರ್ತಿಸುತ್ತಿದ್ದರೂ ಅವರು ಸ್ವತಃ ಮುಸ್ಲಿಮರೆಂದು ವಾದಿಸುತ್ತಾರೆ, ಮುಸ್ಲಿಮರೆಂದು ಕರೆಸಿಕೊಳ್ಳುವ ಬಗ್ಗೆ ಹೆಮ್ಮೆ ಪಡುತ್ತಾರೆ. ಮುಸ್ಲಿಮ್ ಸಮುದಾಯದಲ್ಲಿ ಕೇವಲ ಮುಸ್ಲಿಮರಿಗೆ ದೊರೆಯುವ ಎಲ್ಲ ಅಧಿಕಾರ, ಹಕ್ಕುಗಳನ್ನು ಪಡೆಯ ಬಯಸುತ್ತಾರೆ. ಈ ಪೈಕಿ ಇಸ್ಲಾಮಿನ ದೃಷ್ಟಿಯಲ್ಲಿ ನೈಜ ಮುಸ್ಲಿಮರೆಂದು ಅಂಗೀಕರಿಸಬಹುದಾದ ಕೆಲವರೂ ಇದ್ದಾರೆ.

ಪ್ರಜ್ಞಾ ಹೀನ ಮುಸಲ್ಮಾನ್

ಈ ಪರಿಸ್ಥಿತಿಗೆ ಕಾರಣವೇನು? ಅದಕ್ಕೆ ಕಾರಣ ಒಂದೇ. ಇವರ ತಂದೆ ತಾಯಂದಿರು ಮುಸ್ಲಿಮರಾಗಿದ್ದರು ಮತ್ತು ಇವರು ಮುಸ್ಲಿಮ್ ಮನೆಯಲ್ಲಿ ಅನಿರೀಕ್ಷಿತವಾಗಿ ಹುಟ್ಟಿದ್ದಾರೆ ಎಂಬ ಕಾರಣದಿಂದ ಮಾತ್ರ ಇವರು ಮುಸ್ಲಿಮರಾಗಿ ಬಿಟ್ಟಿರುವ ಮುಸ್ಲಿಮರಾಗಿದ್ದಾರೆ. ಮಾನವನಿಗೆ ಜನ್ಮತಃ ಮನೆತನ ಮತ್ತು ವಂಶಪರಂಪರೆ ದೊರೆಯಬಹುದು. ರಾಷ್ಟ್ರೀಯತೆಯೂ ದೊರೆಯಬಹುದು. ಆದರೆ ಆದರ್ಶ-ವಿಶ್ವಾಸವಿಲ್ಲದೆ ಕೇವಲ ಹುಟ್ಟಿನ ಆಧಾರದಲ್ಲಿ ಯಾರಿಗೂ ಇಸ್ಲಾಮ್ ಲಭಿಸಲಾರದೆಂಬ ಸತ್ಯವನ್ನು ಕರ್ತವ್ಯ ಪ್ರಜ್ಞೆಯಿಂದ ಆಲೋಚಿಸುವವರೆಲ್ಲರೂ ಗ್ರಹಿಸಬಹುದಾಗಿದೆ. ಜನ್ಮತಃ ಮಾನವನು ಶೂದ್ರನಾಗಬಹುದು, ರಜಪೂತನಾಗಬಹುದು, ಭಾರತೀಯನಾಗಬಹುದು. ಆಂಗ್ಲನಾಗಬಹುದು, ಗ್ರೀಕನಾಗಬಹುದು. ಆದರೆ ಕೇವಲ ತಾಯಿಯ ಉದರ ಮತ್ತು ತಂದೆಯ ವೀರ್ಯದಿಂದ ಮಾನವನಿಗೆ 'ಧರ್ಮ' ದೊರೆಯುವುದಿಲ್ಲ. ಮಾನವನು ಆಲೋಚಿಸಿ, ಅರಿತು ಅದನ್ನು ತೃಪ್ತಿ ಮತ್ತು ಮನಃಪೂರ್ವಕ ಅಂಗೀಕರಿಸಿದರೆ ಮಾತ್ರ ಧರ್ಮವನ್ನು ಪಡೆಯಬಹುದು. ಆದ್ದರಿಂದಲೇ ನಮ್ಮ ಪರಂಪರಾಗತ ಮುಸ್ಲಿಮರಲ್ಲಿ, ಮುಸ್ಲಿಮ್ ಹೆಸರಿದ್ದರೂ ಇಸ್ಲಾಮ್ ಎಂಬ ಗುಣ ಮಾಯವಾಗಿದೆ. ಅವರಿಗಾಗಿ ಇಸ್ಲಾಮ್ ಆದೇಶಿಸಿದ ಜೀವನ ಮಾರ್ಗವೇ ಅವರ ಎದುರಲ್ಲಿಲ್ಲ. ಅದನ್ನು ತಿಳಿಯಲು ಅವರು ಎಂದೂ ಪ್ರಯತ್ನಿಸಿಲ್ಲ. ಅವರು ಅದರಿಂದ ಸಂತೃಪ್ತರಾಗಿ ಅದರಂತೆ ಬಾಳಬೇಕೆಂದೂ ಬಯಸಿಲ್ಲ. ಇಸ್ಲಾಮಿನ ವಾಸ್ತವಿಕತೆಯ ಕುರಿತು ಪ್ರವಾದಿಯವರು ಹೀಗೆಂದಿದ್ದಾರೆ:

ಅಲ್ಲಾಹನನ್ನು ಪ್ರಭುವಾಗಿಯೂ(ರಬ್ಬ್) ಪ್ರವಾದಿ ಮುಹಮ್ಮದ್‌ರನ್ನು(ಸ) ಸಂದೇಶವಾಹಕರಾಗಿಯೂ ಇಸ್ಲಾಮನ್ನು ಧರ್ಮವಾಗಿಯೂ ಸಂತೃಪ್ತನಾದವನು ಮಾತ್ರ ಈಮಾನಿನ(ವಿಶ್ವಾಸದ) ಮಾಧುರ್ಯವನ್ನು ಸವಿದನು.

ಈ ಪ್ರವಾದಿ ವಚನದ ಹಿನ್ನೆಲೆಯಲ್ಲಿ ಆಲೋಚಿಸಿ, ತಿಳಿದು, ಸಂತೋಷ, ಸಂತೃಪ್ತಿಯಿಂದ ಇಸ್ಲಾಮನ್ನು ಸ್ವೀಕರಿಸದವರು ಈಮಾನ್ ಮತ್ತು ಇಸ್ಲಾಮಿನ ಸ್ವಾದವನ್ನೂ ಧರ್ಮದ (ದೀನ್) ಮಾಧುರ್ಯವನ್ನೂ ಸವಿದಿಲ್ಲವೆಂದು ವ್ಯಕ್ತವಾಗುತ್ತದೆ.

ಮುಸ್ಲಿಮ್ ಯಾರು?

ಜಗತ್ತಿನಲ್ಲಿ ದೇವತ್ವ ಮತ್ತು ಪ್ರಭುತ್ವವನ್ನು ವಾದಿಸುವ ಎಲ್ಲರಿಂದಲೂ ಮುಖ ತಿರುಗಿಸಿ ಸಂಪೂರ್ಣ ಪ್ರಜ್ಞೆಯಿಂದ ಜಗತ್ತಿನ ಏಕೈಕ ಸಂರಕ್ಷಕನ ದಾಸನಾಗುವುದೇ ಮುಸ್ಲಿಮನಾಗುವುದೆಂಬುದರ ತಾತ್ಪರ್ಯ. ಮಾನವರು ಸ್ವೇಚ್ಛೆಯಂತೆ ನಡೆಯಬೇಕು, ನಮ್ಮ ನಿಯಮಾದೇಶಗಳನ್ನು ಪಾಲಿಸಬೇಕು. ಇತರರು ನಮಗೆ ಸಂಪೂರ್ಣ ಶರಣಾಗಬೇಕೆಂದು ವಾದಿಸುವ ಎಲ್ಲ ಶಕ್ತಿಗಳನ್ನೂ ತೊರೆದು ದಾಸ್ಯ-ಆರಾಧನೆಗೆ ಅರ್ಹ ಅಲ್ಲಾಹ್ ಮಾತ್ರವೆಂದು ಸಂಪೂರ್ಣವಾಗಿ ತಿಳಿದು ಆತನ ಸಂಪ್ರೀತಿಗಾಗಿ ಬಾಳಬೇಕು. ಇಂದು ಲೌಕಿಕ ಜೀವನಕ್ಕೆ

ಅಂಗೀಕರಿಸಲಾಗುತ್ತಿರುವ ವಿವಿಧ ಮಾರ್ಗಗಳಲ್ಲಿ, ಇಸ್ಲಾಮ್ ಸೂಚಿಸಿರುವ ಮಾರ್ಗವೇ ತನಗೆ ಅತ್ಯಂತ ಹಿತಕರವೆಂದು ನಿರ್ಧರಿಸುವುದೂ ಮುಸ್ಲಿಮನಾಗುವುದರ ಇಂಗಿತವಾಗಿದೆ. ಇತರ ಮಾರ್ಗಗಳನ್ನು ಅನುಗಮಿಸುವುದಂತಿರಲಿ, ಅವುಗಳ ಬಗ್ಗೆ ಕಿಂಚಿತ್ ಒಲವು, ಬಯಕೆ ಅಂತರಂಗದಲ್ಲಿ ಮೂಡಬಾರದು. ತನ್ನ ಹೃದಯದಲ್ಲಿ ಇಸ್ಲಾಮ್ ಮಾತ್ರ ಪ್ರಿಯಕರವಾಗಿರಬೇಕು. ಹಾಗೆಯೇ ಜಗತ್ತಿನಲ್ಲಿ ಮಾನವರ ಮಾರ್ಗದರ್ಶಕ ಮತ್ತು ನಾಯಕರೆಂದು ವಾದಿಸಿದ ಹಾಗೂ ವಾದಿಸುತ್ತಿರುವ ಎಲ್ಲರನ್ನೂ ತೊರೆದು ಕೇವಲ ಪ್ರವಾದಿ ಮುಹಮ್ಮದ್‌ರನ್ನು(ಸ) ಮಾರ್ಗದರ್ಶಕನೆಂದು ಅಂಗೀಕರಿಸಿ ಅವರು ಆದೇಶಿಸಿದ ಮಾರ್ಗದಲ್ಲಿಯೇ ಚಲಿಸುವೆನೆಂದು ಪ್ರತಿಜ್ಞೆ ಕೈಗೊಳ್ಳುವುದು ಮುಸ್ಲಿಮನಾಗುವುದರ ಇನ್ನೊಂದು ತಾತ್ಪರ್ಯವಾಗಿದೆ.

ಮೇಲೆ ಹೇಳಿದಂತೆ, ಯಾವನಾದರೂ ಅಲ್ಲಾಹನನ್ನು ಪ್ರಭುವಾಗಿ, ಪ್ರವಾದಿ ಮುಹಮ್ಮದ್‌ರನ್ನು(ಸ) ಸಂದೇಶವಾಹಕರಾಗಿ, ಇಸ್ಲಾಮನ್ನು ಧರ್ಮವನ್ನಾಗಿ ಅಂಗೀಕರಿಸಿದ ಕೂಡಲೇ ಆತ ಮುಸ್ಲಿಮನಾಗಿ ಬಿಡುತ್ತಾನೆ. ಹೀಗೆ ಇಸ್ಲಾಮನ್ನು ಅಂಗೀಕರಿಸಿದ ಬಳಿಕ, ದೇಹೇಚ್ಛೆಗಳನ್ನು ಅಲ್ಲಾಹನ ಸಂಪ್ರೀತಿ, ಇಸ್ಲಾಮಿನ ಕಾನೂನು ಮತ್ತು ಪ್ರವಾದಿ ಮುಹಮ್ಮದ್‌ರ(ಸ) ಮಾರ್ಗದರ್ಶನಕ್ಕೆ ಬದ್ಧಗೊಳಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಅನ್ಯಥಾ ಕೆಲವು ಸಮಸ್ಯೆಗಳ ಕುರಿತು ಅಲ್ಲಾಹನು ಅನುಮತಿಸಿದ ಅಧಿಕಾರ ವ್ಯಾಪ್ತಿ, ಪ್ರವಾದಿ ಮುಹಮ್ಮದ್‌ರು(ಸ) ಆ ಬಗ್ಗೆ ತೋರಿದ ಮಾರ್ಗದರ್ಶನ ಮತ್ತು ಕುರ್‌ಆನ್ ಆ ಬಗ್ಗೆ ಕೈಗೊಂಡ ನಿರ್ಧಾರ ಏನಿದ್ದರೂ ನನಗೆ ಅದರಲ್ಲಿ ಸಹಮತವಿಲ್ಲ. ಆದ್ದರಿಂದ ನಾನು ಆ ವಿಷಯಗಳಲ್ಲಿ ನನ್ನ ಅಭಿಪ್ರಾಯದಂತೆ ವರ್ತಿಸುತ್ತೇನೆ. ಅಥವಾ ಜಗತ್ತಿನಲ್ಲಿ ಇಂದು ರೂಢಿಯಲ್ಲಿರುವ ಸಂಪ್ರದಾಯವು ಅವುಗಳಿಗೆ ವಿರುದ್ಧವಾಗಿದೆ. ನಾನು ಜಾಗತಿಕ ರೂಢಿಯಂತೆ ವರ್ತಿಸುತ್ತೇನೆ ಎಂದು ಮುಂತಾಗಿ ಹೇಳುವ ಹಕ್ಕು, ಅಧಿಕಾರ ಮುಸ್ಲಿಮನೆನ್ನುವ ಯಾವನಿಗೂ ಇಲ್ಲ. ಆ ಧೋರಣೆಯನ್ನು ಹೊಂದಿದವರು ಯಾರೇ ಆಗಿರಲಿ. ಈಮಾನ್ ವಾಸ್ತವದಲ್ಲಿ ಆತನ ಮನದಲ್ಲಿ ಸಂಪೂರ್ಣ ಪ್ರವೇಶಿಸಿಲ್ಲವೆಂದು ಭಾವಿಸಬೇಕು. ವಿಶ್ವಾಸವಿರಿಸುವುದೆಂದರೆ, ಮಾನವನು ತನ್ನ ಆಶೆ, ಆಕಾಂಕ್ಷೆ, ಬಯಕೆ, ಭಾವನೆ, ವಿಚಾರ-ದೃಷ್ಟಿಕೋನಗಳನ್ನು ಸಂಪೂರ್ಣವಾಗಿ ಇಸ್ಲಾಮಿಗೆ ಅಧೀನಪಡಿಸುವುದಾಗಿದೆ. ಜಗತ್ತಿನಲ್ಲಿ ಪ್ರಚಾರದಲ್ಲಿರುವ ಮತ್ತು ರೂಢಿಯಲ್ಲಿರುವ ಹಾಗೂ ದೇಹೇಚ್ಛೆಗಳನ್ನು ಆಕರ್ಷಿಸುವ ಎಲ್ಲ ಇಸ್ಲಾಮೇತರ ಸಂಪ್ರದಾಯಗಳನ್ನು ಸಂಪೂರ್ಣವಾಗಿ ತೊರೆಯುವುದೇ ನೈಜ ಈಮಾನ್ ಆಗಿದೆ. ಇದೇ ವಾಸ್ತವಿಕತೆಯನ್ನು ಪ್ರವಾದಿಯವರು ಹೀಗೆ ವಿವರಿಸಿದ್ದಾರೆ:

'ತಮ್ಮ ಇಚ್ಛೆಗಳನ್ನು ನಾನು ತಂದ ಸನ್ಮಾರ್ಗಕ್ಕೆ ವಿಧೇಯಗೊಳಿಸದಿರುವ ತನಕ ನೀವು ಯಾರೂ ಸತ್ಯವಿಶ್ವಾಸಿಗಳಾಗಲಾರಿರಿ.'

ಮಾನವನು ತನ್ನ ದೇಹೇಚ್ಛೆಗಳನ್ನು ಅಲ್ಲಾಹನಿಗೆ ಬಲಿಯರ್ಪಿಸಿ, ತನ್ನ ಸರ್ವಸ್ವವನ್ನೂ ಪ್ರವಾದಿ ಮುಹಮ್ಮದ್‌ರ(ಸ) ಮಾರ್ಗದರ್ಶನಕ್ಕೆ ಸಮರ್ಪಿಸದಿರುವ ತನಕ ಮುಸ್ಲಿಮನಾಗಲು ಸಾಧ್ಯವಿಲ್ಲವೆಂದು ಈ ಪ್ರವಾದಿ ವಚನದ ತಾತ್ಪರ್ಯವಾಗಿದೆ. ಓರ್ವರು ಸ್ವೇಚ್ಛೆಯಿಂದ ಬಾಳಬೇಕೆಂದು ವಾದಿಸುತ್ತಿರುವ ತನಕ ಅವರ ಹೃದಯದಲ್ಲಿ ಈಮಾನ್ ಮತ್ತು ಇಸ್ಲಾಮ್

ಪ್ರವೇಶಿಸಲಾರದು. ಧರ್ಮವನ್ನು ಬೇಶರತ್ ಅನುಸರಿಸುವುದರಿಂದ ಹೃದಯವು ಸದಾ ಸಂತೃಪ್ತವಾಗಿರುವುದೇ ವಾಸ್ತವದಲ್ಲಿ ಈಮಾನ್ ಮತ್ತು ಇಸ್ಲಾಮ್ ಆಗಿದೆ.

ಇಸ್ಲಾಮಿೂ ಜೀವನಕ್ಕೆ ಮಾನವನು ಕರ್ತವ್ಯ ಪ್ರಜ್ಞನಾಗಿರುವುದೆಂಬ ಅರ್ಥವೂ ಇದೆ. ಸತ್ಯವಿಶ್ವಾಸಿಯ ಜೀವನವು ಹೊಣೆಗಾರಿಕೆಯಿರುವ ಜೀವನವಾಗಿದೆ. ತನ್ನ ಎಲ್ಲ ಮಾತು-ಕೃತಿಗಳ ಕುರಿತು ಉತ್ತರಿಸಬೇಕಾಗಿದೆಯೆಂಬ ಪ್ರಜ್ಞೆಯು ವಿಶ್ವಾಸವಿರುವ ಹೃದಯದಿಂದ ಸರ್ವಥಾ ತೊಲಗಬಾರದು. ಇಹಲೋಕದಲ್ಲಿ ತಾನು ಹೇಗೆ ವರ್ತಿಸಿದೆ, ಹೇಗೆ ಮಾತಾಡಿದೆ, ಆಲಿಸಿದೆ, ಯಾವ ರೀತಿಯಿಂದ ಜೀವನ ಸಾಗಿಸಿದೆ, ಶಕ್ತಿ-ಸಾಮರ್ಥ್ಯ, ಯೋಗ್ಯತೆಗಳನ್ನು ಯಾವ ಕಾರ್ಯಗಳಿಗೆ ವ್ಯಯಿಸಿದೆ, ಯಾವ ಮಾರ್ಗದಿಂದ ಹಣ ಸಂಪಾದಿಸಿದೆ, ಹೇಗೆ ವ್ಯಯಿಸಿದೆ, ಯಾವ ಧ್ಯೇಯ ಸಾಧನೆಗಾಗಿ ಲೋಕದಲ್ಲಿ ಶ್ರಮಿಸಿದೆ ಇತ್ಯಾದಿ ವಿಷಯಗಳ ಕುರಿತು ಮರಣಾನಂತರ ಮಾನವನು ಅಲ್ಲಾಹನ ಮುಂದೆ ಲೆಕ್ಕ ಸಮರ್ಪಿಸಬೇಕಾಗಿದೆ. ಮರಣಾನಂತರ ಶಾಶ್ವತವಾಗಿ ಮಣ್ಣಾಗಿ ಬಿಡುತ್ತೇನೆ ಅಥವಾ ಜೀವನದ ಕರ್ಮಗಳ ಯಾವ ಪರಿಣಾಮಕ್ಕೂ ಗುರಿಯಾಗದೆ ಲೌಕಿಕ ಜೀವನವನ್ನು ಇಷ್ಟಬಂದಂತೆ ನಿರ್ವಹಿಸಬಹುದೆಂಬ ಭಾವನೆ ವಿಶ್ವಾಸಿಗಳಲ್ಲಿ ಮೂಡಲಾರದು. ಈ ಜೀವನದ ಬಳಿಕ ಇನ್ನೊಂದು ಜೀವನವಿದೆ. ಅದರಲ್ಲಿ ಅಲ್ಲಾಹನ ಮುಂದೆ ಹಾಜರಾಗಿ ತನ್ನ ಪ್ರತಿಯೊಂದು ಚಟುವಟಿಕೆ, ಚಲನೆ, ಜೀವನ ಸಂಪನ್ಮೂಲಗಳ ಪ್ರತಿಯೊಂದು ಕಣದ ಬಗ್ಗೆ ಉತ್ತರಿಸಬೇಕಾಗಿದೆಯೆಂಬ ದೃಢವಿಶ್ವಾಸವಿರುತ್ತದೆ. ಈ ವಾಸ್ತವಿಕತೆಯನ್ನು ಪ್ರವಾದಿ(ಸ) ಹೀಗೆಂದಿದ್ದಾರೆ:

'ತಿಳಿಯಿರಿ! ನೀವು ಪ್ರತಿಯೊಬ್ಬರೂ ಆಡಳಿತಗಾರರು, ಪ್ರತಿಯೊಬ್ಬರೂ ತಮ್ಮ ಪ್ರಜೆಗಳ ಬಗ್ಗೆ ಪ್ರಶ್ನಿಸಲ್ಪಡುವರು.'

ಇಲ್ಲಿ ಪ್ರಜೆಗಳೆಂದರೆ ಮಾನವರ ಅಧೀನದಲ್ಲಿರುವ ಎಲ್ಲವೂ ಒಳಗೊಂಡಿದೆ. ಪತ್ನಿ-ಮಕ್ಕಳು, ಸೇವಕ, ಕೆಳ ಅಧಿಕಾರಿ, ಪ್ರಾಣಿ-ಪಕ್ಷಿಗಳು, ಜೀವನೋಪಕರಣಗಳು ಹೀಗೆ ಮಾನವನು ಅಧಿಕಾರ ನಡೆಸುವ ಮತ್ತು ಆತನನ್ನು ಅವಲಂಬಿಸಿರುವ ಎಲ್ಲರೂ ಎಲ್ಲವೂ ಪ್ರಜೆಗಳಾಗಿವೆ. ಈ ಅರ್ಥದಲ್ಲಿ ಜಗತ್ತಿನಲ್ಲಿ ಆಡಳಿತಗಾರರಲ್ಲದವರು ಯಾರೂ ಇಲ್ಲ. ಎಲ್ಲರೂ ಯಾವುದಾದರೊಂದು ವಲಯದಲ್ಲಿ ಅಧಿಕಾರಿಯಾಗಿರುತ್ತಾರೆ. ಮಹಿಳೆಯು ಮನೆಯ ಆಡಳಿತಾಧಿಕಾರಿಣಿ. ಪತಿಯು ಪತ್ನಿ ಮಕ್ಕಳ ಆಡಳಿತಗಾರ, ಉನ್ನತಾಧಿಕಾರಿಯು ಕೆಳಗಿನವರ ಆಡಳಿತಗಾರ, ಸರಕಾರದ ನಾಯಕ ಎಲ್ಲ ಪ್ರಜೆಗಳ ಆಡಳಿತಗಾರನಾಗಿದ್ದಾನೆ. ಒಟ್ಟಿನಲ್ಲಿ, ಎಲ್ಲ ಮಾನವರೂ ಒಂದಲ್ಲೊಂದು ರೀತಿಯಲ್ಲಿ ಖಂಡಿತವಾಗಿಯೂ ಆಡಳಿತಗಾರರೇ ಆಗಿರುತ್ತಾರೆ. ಯಾರೊಬ್ಬರೂ ಆ ಹುದ್ದೆಯಿಂದ ಮುಕ್ತವಾಗಿರಲಾರರು. ಈ ಆಧಾರದಲ್ಲಿಯೇ ಪ್ರವಾದಿಯವರು(ಸ) ಜನರೊಡನೆ, ತಿಳಿಯಿರಿ! ನೀವು ನಿಮ್ಮ ಪ್ರಜೆಗಳ ವಿಷಯದಲ್ಲಿ ಹೊಣೆಗಾರರಾಗಿರುವಿರಿ. ನಿಮಗಿರುವ ಅಧಿಕಾರವನ್ನು ನಿಮ್ಮ ಪ್ರಜೆಗಳಲ್ಲಿ ಹೇಗೆ ಬಳಸಿರುವಿರೆಂಬ ಕುರಿತು ಅಲ್ಲಾಹನ ಮುಂದೆ ಉತ್ತರಿಸಬೇಕಾಗಿದೆಯೆಂಬ ಪ್ರಜ್ಞೆಯಿರಬೇಕು' ಎಂದು ಎಚ್ಚರಿಸಿರುವುದಾಗಿದೆ. ಈ ವಿಶ್ವಾಸವು ಮುಸಲ್ಮಾನನ ಜೀವನವನ್ನು ಜವಾಬ್ದಾರಿಕೆಯ ಜೀವನವನ್ನಾಗಿ ಮಾರ್ಪಡಿಸುತ್ತದೆ. ತಿನ್ನುವ, ಕುಡಿಯುವ, ಧರಿಸುವ, ವರ್ತಿಸುವ, ವ್ಯವಹರಿಸುವ

ರೀತಿ-ನೀತಿಗಳಲ್ಲಿ ಯಾವುದೇ ಲಂಗು ಲಗಾಮಿಲ್ಲದೆ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಅವುಗಳಿಗಾಗಿ ವ್ಯಯಿಸಿ, ದೇಹೇಚ್ಛೆಯ ಪ್ರೇರಣೆಯಂತೆ ಮುಕ್ತವಾಗಿ ವರ್ತಿಸುವ ಅನಿಯಂತ್ರಿತ ಜೀವನ ಸಾಗಿಸಲು ಮುಸಲ್ಮಾನನಿಗೆ ಸರ್ವಥಾ ಸಾಧ್ಯವಿಲ್ಲ. ಆತನು, ಬಯಸಿದ ಗದ್ದೆಗಳಿಗ ನುಸುಳಿ ಕಣ್ಣಿಗೆ ಕಾಣಿಸಿದ ಪೈರುಗಳಿಗೆ ಬಾಯಿ ಹಾಕಿ, ಮುಖ ತಿರುಗಿದ ಕಡೆಗೆ ಓಡಿ ಹೋಗುವಂತಹ ಉರುಳು ಬಿಚ್ಚಿದ ಪ್ರಾಣಿಯಲ್ಲ. ಮುಸಲ್ಮಾನನ ನೈಜ ಜೀವನ ಕ್ರಮ ಹೇಗಿರಬೇಕೆಂಬ ಕುರಿತು ಪ್ರವಾದಿಯವರು(ಸ) ಹೀಗೆಂದಿದ್ದಾರೆ:

'ಮುಸಲ್ಮಾನ್ ಮತ್ತು ಈಮಾನಿನ ಪರಸ್ಪರ ಸಂಬಂಧವನ್ನು ಗೂಟಕ್ಕೆ ಕಟ್ಟಿದ ಒಂದು ಕುದುರೆಗೆ ಹೋಲಿಸಬಹುದು. ಅದು ಎಷ್ಟೇ ಸುತ್ತಾಡಿದರೂ ನಿರ್ದಿಷ್ಟ ಗಡಿಗೆ ತಲಪಿದರೆ ಕಟ್ಟಿದ ಗೂಟದ ಬಳಿಗೆ ಮರಳುತ್ತದೆ.'

ಮುಸಲ್ಮಾನನು 'ಈಮಾನ್' ಮತ್ತು 'ಇತಾಅತ್'(ವಿಶ್ವಾಸ ಮತ್ತು ಅನುಸರಣೆ) ಎಂಬ ಗೂಟಕ್ಕೆ ಕಟ್ಟಿ ಹಾಕಲ್ಪಟ್ಟಿದ್ದರೆ ಆತನನ್ನು ಕಟ್ಟಿದ ಹಗ್ಗವು ಎಷ್ಟೇ ಉದ್ದವಾಗಿದ್ದರೂ ನಿರ್ದಿಷ್ಟ ಮಿತಿಯೊಳಗೆ ಮಾತ್ರ ಆತ ತಿರುಗಾಡಬಹುದಾಗಿದೆ. ಗಡಿಯಾಚೆ ಹೋಗಲು ಸಾಧ್ಯವಿಲ್ಲ. ತನ್ನ ಎಲ್ಲ ಶಕ್ತಿ, ಸಾಮರ್ಥ್ಯ, ಪರಿಶ್ರಮಗಳನ್ನು ಆ ಮಿತಿಯೊಳಗೆ ಮಾತ್ರ ವಿನಿಯೋಗಿಸಬೇಕಾಗುವುದು. ಆತನ ಎಲ್ಲ ಆಶೆ ಅಭಿಲಾಷೆಗಳು, ಪ್ರಯತ್ನ ಪರಿಶ್ರಮಗಳು ಆ ನಿರ್ದಿಷ್ಟ ಗಡಿಗೆ ಸೀಮಿತವಾಗಿರಬೇಕಾಗುವುದು. ಗಡಿಯಾಚೆ ಹೋಗುವ ಯಾವ ಅಧಿಕಾರವೂ ಆತನಲ್ಲಿ ಉಳಿಯುವುದಿಲ್ಲ.

ಜಮಾಅತೆ ಇಸ್ಲಾಮಿ ಏನು ಬಯಸುತ್ತದೆ?

ಇಸ್ಲಾಮಿನ ಈ ಸಂಕ್ಷಿಪ್ತ ವಿವರಣೆಯ ಬಳಿಕ, ಜಮಾಅತೆ ಇಸ್ಲಾಮಿ ಕಾರ್ಯಕರ್ತರಾದ ನಾವು ಏನನ್ನು ಬಯಸುತ್ತಿದ್ದೇವೆಂದು ಸಂಕ್ಷಿಪ್ತವಾಗಿ ಇಲ್ಲಿ ವಿವರಿಸುತ್ತೇನೆ-

ಈ ನೈಜ ಇಸ್ಲಾಮಿನ ಕುರಿತು ಚೆನ್ನಾಗಿ ಪರಿಶೀಲಿಸಿದ ಬಳಿಕ ಅದನ್ನು, ತಮ್ಮ ಜೀವನದಲ್ಲಿ ಧರ್ಮವಾಗಿ ಅಂಗೀಕರಿಸಲು ಸಿದ್ಧರಿದ್ದೀರೋ ಇಲ್ಲವೋ ಎಂಬ ನಿರ್ಧಾರ ಕೈಗೊಳ್ಳಬೇಕೆಂದು ಸಕಲ ಮಾನವರಿಗೂ ನಾವು ಕರೆ ನೀಡುತ್ತೇವೆ. ಇಸ್ಲಾಮ್ ಹುಟ್ಟಿನಿಂದ ಅಥವಾ ಕೇವಲ ಪರಂಪರಾಗತವಾಗಿ ದೊರೆಯುವುದಿಲ್ಲವೆಂದು ನಾನು ಮೊದಲೇ ಸ್ಪಷ್ಟಪಡಿಸಿದ್ದೇನೆ. ಒಟ್ಟಿನಲ್ಲಿ, ಸಂತೋಷ-ಸಂತೃಪ್ತಿಯಿಂದ ನೀವು ಅದನ್ನು ಸ್ವೀಕರಿಸಲು ಸಿದ್ಧರಿದ್ದೀರಾ? ಇಸ್ಲಾಮ್-ವಿಧಿಸುವ ನಿಬಂಧನೆಗಳನ್ನು ಅಂಗೀಕರಿಸಲು ನಿಮಗೆ ಮನಸ್ಸಿದೆಯೇ? ಈಮಾನ್ ಎಂಬ ಗೂಟಕ್ಕೆ ಇಸ್ಲಾಮ್ ಎಂಬ ಹಗ್ಗದಿಂದ ಬಂಧಿಸಲ್ಪಡುವುದನ್ನು ನೀವು ಮೆಚ್ಚುತ್ತೀರಾ? ಎಂಬೀ ಪ್ರಶ್ನೆಗಳನ್ನು ಸ್ಪಷ್ಟವಾಗಿ ನಿಮ್ಮ ಮುಂದಿರಿಸುವುದು ಅತ್ಯವಶ್ಯಕವಾಗಿದೆ. ಯಾರಿಗಾದರೂ ಈ ಧರ್ಮದಲ್ಲಿ ಸಂತೃಪ್ತಿಯಿಲ್ಲದಿದ್ದರೆ- ಇಸ್ಲಾಮಿನ ಮಿತಿಮೇರೆಯಲ್ಲಿ ಬಾಳಲು ಸಾಧ್ಯವಿಲ್ಲದಿದ್ದರೆ- ಅವರಿಗೆ ಅದನ್ನು ತೊರೆಯುವ ಸಂಪೂರ್ಣ ಸ್ವಾತಂತ್ರ್ಯವಿದೆ. ಆದರೆ ಪರಿತ್ಯಜಿಸುವುದೆಂದರೆ ಸಂಪೂರ್ಣವಾಗಿ ತಿರಸ್ಕರಿಸುವುದೆಂದರ್ಥ. ತನ್ನ ಹೆಸರು ಬದಲಾಯಿಸಬೇಕು. ಮುಸ್ಲಿಮ್ ಸಮುದಾಯದೊಂದಿಗಿನ ಸಂಬಂಧ ಕಡಿಯಬೇಕು. ತಾನು ಮುಸಲ್ಮಾನನೆಂಬ ವಾದ

ತೊರೆಯಬೇಕು. ತರುವಾಯ ತನಗಿಷ್ಟವಿರುವ ಹಾದಿಯಲ್ಲಿ ಸ್ವಚ್ಛಂದ ವಿಹರಿಸಬಹುದು. ತನ್ನ ಹೊಸ ಆದರ್ಶದನ್ವಯ ಇಷ್ಟವಿರುವ ಹೆಸರು ಸ್ವೀಕರಿಸಬಹುದು. ಇಷ್ಟವಿರುವ ಯಾವ ಸಮುದಾಯಕ್ಕೂ ಸೇರಬಹುದು. ಅಥವಾ ಸಹಪಯಣಿಗರ ಜತೆಗೂಡಿ ಹೊಸ ಸಮುದಾಯವನ್ನು ರೂಪಿಸಬಹುದು. ಹೇಗಿದ್ದರೂ ಇಸ್ಲಾಮನ್ನು ಮೆಚ್ಚದೆ, ಅದರ ಅಂಗೀಕಾರದಿಂದ ಸಂತೃಪ್ತರಾಗದೆ, ವಿಚಾರ-ಕರ್ಮಗಳಲ್ಲಿ ಅದನ್ನು ಸಂಪೂರ್ಣವಾಗಿ ತೊರೆದು ಇತರ ಮಾರ್ಗಗಳನ್ನು ಅಂಗೀಕರಿಸುವುದರೊಂದಿಗೆ ನಾವು ಮುಸ್ಲಿಮರೆಂದು ಸ್ವತಃ ಹೇಳುತ್ತಾ ಮುಸಲ್ಮಾನರೆಂದು ಕರೆಯಬೇಕೆಂದು ಒತ್ತಾಯಿಸುವುದಲ್ಲದೇ, ಇಸ್ಲಾಮಿನ ಸೇವಕರು ಮತ್ತು ಮುಫ್ತಿಗಳೆಂದು ಸ್ವತಃ ಮೆರೆದಾಡುವ ಈ ವಂಚನೆ ಮತ್ತು ಅಪಹಾಸ್ಯವನ್ನು ಕೊನೆಗೊಳಿಸಬೇಕು. ಬಹಳ ಕಾಲದಿಂದ ನಡೆಯುತ್ತಿರುವ ಈ ಆಟವನ್ನು ನಾವು ಮುಂದುವರಿಯಲು ಬಿಡಲಾರೆವು. ಹಾಗೆಯೇ ಇಸ್ಲಾಮಿನಲ್ಲಿ ನಮ್ಮ ಆಶೆ-ಆಕಾಂಕ್ಷೆಗಳಿಗೆ ಯೋಗ್ಯವಾದುದನ್ನು ಮಾತ್ರ ಅಂಗೀಕರಿಸುತ್ತೇವೆ. ದೇಹೇಚ್ಛೆಗಳಿಗೆ ಪ್ರತಿಕೂಲವಾದವುಗಳನ್ನು ನಿರ್ಲಕ್ಷಿಸುತ್ತೇವೆಂಬ ಕಪಟ ನೀತಿಯನ್ನೂ ತೊರೆಯಬೇಕು. ದೇವಗ್ರಂಥದಿಂದ ತಮಗೆ ಇಷ್ಟವಿರುವುದನ್ನು ಸ್ವೀಕರಿಸಿ ಇಷ್ಟವಿಲ್ಲದವುಗಳನ್ನು ತಿರಸ್ಕರಿಸಿದ ಯಹೂದಿಯರನ್ನು ಅಲ್ಲಾಹನು ಪ್ರವಾದಿಯವರ ಪವಿತ್ರ ನಾಲಗೆಯಿಂದ ಹೀಗೆ ಜರೆದಿದ್ದಾನೆ:

'ನೀವು ಗ್ರಂಥದ ಕೆಲವು ಭಾಗಗಳಲ್ಲಿ ವಿಶ್ವಾಸವಿಡುತ್ತೀರಿ. ಕೆಲವು ಭಾಗಗಳನ್ನು ಕೈಬಿಡುತ್ತೀರಿ.'

ಈ ಮಂದಿಯ ಅವಸ್ಥೆಯೂ ಅದೇ ಆಗಿದೆ. ಈ ದೇಹೇಚ್ಛೆಯ ಪೂಜೆ ಮತ್ತು ಕಪಟ ಭಕ್ತಿಯ ಖೋಟಾನಾಣ್ಯ ಇನ್ನು ಮುಂದೆ ಈಮಾನಿನ ಹೆಸರಿನಲ್ಲಿ ಖರ್ಚಾಗಲಾರದು. ಸ್ವಾರ್ಥ ಧ್ಯೇಯೋದ್ದೇಶಗಳಿಗಾಗಿ ಮುಸಲ್ಮಾನನಾಗಿ ಇಸ್ಲಾಮಿನ ಹೆಸರಲ್ಲಿ ಹಕ್ಕುಗಳನ್ನು ಪಡೆಯುತ್ತಲಿದ್ದರೂ ಇಸ್ಲಾಮಿನ ಪಾಲನೆಯ ವಿಷಯದಲ್ಲಿ ಮುಸ್ಲಿಮೇತರನಾಗಿ ಬಿಡುವ ವಂಚನೆಯು ಓರ್ವ ಸಭ್ಯ ಮಾನವನಿಗೆ ಭೂಷಣವಲ್ಲ. ಮಿತ್ರರೇ, ನಿಮ್ಮ ಜೀವನ ಮಾರ್ಗವೆಂಬ ನೆಲೆಯಲ್ಲಿ ಇಸ್ಲಾಮ್ ನಿಮಗೆ ಸ್ವೀಕಾರಾರ್ಹವೇ? ಇದು ನಾವು ಎಲ್ಲರ ಮುಂದೆ ಮಂಡಿಸುವ ಮತ್ತು ಅವರಿಂದ ಸ್ಪಷ್ಟ ಉತ್ತರ ಬಯಸುವ ಪ್ರಶ್ನೆಯಾಗಿದೆ. ಸ್ವೀಕಾರಾರ್ಹವಲ್ಲವೆಂದಾದರೆ ನೀವು ಅದನ್ನು ಸ್ಪಷ್ಟವಾಗಿ ನಿರಾಕರಿಸಿ ಇಸ್ಲಾಮಿನ ವ್ಯಾಪ್ತಿಯಿಂದ ಹೊರಹೋಗಿಬಿಡಿರಿ. ಅಥವಾ ಇಸ್ಲಾಮನ್ನು ನೀವು ಮೆಚ್ಚುವುದಿದ್ದರೆ, ನೈಜ ಮುಸ್ಲಿಮನಾಗಿ ಬಾಳ ಬಯಸುವುದಿದ್ದರೆ ನೀವು ಅದನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿರಿ. ಜೀವನದ ಯಾವುದಾದರೊಂದು ಅಂಶವನ್ನು ಅಥವಾ ಕೆಲವಾರು ಅಂಶಗಳ ಬದಲಾಗಿ ಎಲ್ಲ ಅಂಶಗಳನ್ನೂ ಇಸ್ಲಾಮೀಕರಿಸಿರಿ. ನೈಜ ಅನುಸರಣೆಯ ಮಾರ್ಗವನ್ನು ಅವಲಂಬಿಸಿರಿ. ಇಸ್ಲಾಮನ್ನು ಧರ್ಮವಾಗಿ ಅಂಗೀಕರಿಸಿದ ಬಳಿಕ ಸ್ವೇಚ್ಛಾವಾದವನ್ನು ಅಂಗೀಕರಿಸಬೇಡಿರಿ. ಮುಸ್ಲಿಮನಾದ ಬಳಿಕ ನಾವು ಬುದ್ಧಿ ಮತ್ತು ಇಚ್ಛೆಗೆ ತೋಚಿದ ಮಾರ್ಗವನ್ನು ಬಯಸುತ್ತೇವೆಂದು ಹೇಳುವ ಹಕ್ಕನ್ನು ಇಸ್ಲಾಮ್ ಯಾರಿಗೂ ನೀಡಿಲ್ಲ. ಈ ಸ್ವಾತಂತ್ರ್ಯವನ್ನು ನಿಮ್ಮ ಹಕ್ಕೆಂದು ಇಸ್ಲಾಮ್ ಪರಿಗಣಿಸುವುದಿಲ್ಲ.

ಪುರುಷರೊಡನೆ ಮಾತ್ರವಲ್ಲ, ಸ್ತ್ರೀಯರೊಡನೆಯೂ ನಾವು ಇದನ್ನೇ ಹೇಳುತ್ತೇವೆ. ಮಹಿಳೆಯರು ತಮ್ಮ ವ್ಯಕ್ತಿತ್ವವನ್ನು ಪುರುಷರ ವ್ಯಕ್ತಿತ್ವದೊಡನೆ ಸೇರಿಸಬಾರದೆಂದು ನಾವು ಮಹಿಳೆಯರೊಡನೆ ವಿನಂತಿಸುತ್ತೇವೆ. ಮಹಿಳೆಯರು ಪುರುಷರ ಬಾಲ ಅಥವಾ ಅನುಬಂಧವಲ್ಲ. ಅವರಿಗೆ ಸ್ವಂತ, ಸ್ವತಂತ್ರ ವ್ಯಕ್ತಿತ್ವವಿದೆ. ಪುರುಷರಂತೆಯೇ ಮಹಿಳೆಯರಿಗೂ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗಲಿಕ್ಕಿದೆ. ಅವರ ಕರ್ಮಗಳ ಲೆಕ್ಕವನ್ನು ಸ್ವಯಂ ಸಮರ್ಪಿಸಲಿಕ್ಕಿದೆ ಅಂತ್ಯದಿನದಲ್ಲಿ ಪ್ರತಿಯೊಬ್ಬ ಮಹಿಳೆಯೂ ಆಕೆಯ ಸ್ವಂತ ಸಮಾಧಿಯಿಂದಲೇ ಎಬ್ಬಿಸಲ್ಪಡುತ್ತಾಳೆ; ತಂದೆ, ಪತಿ ಅಥವಾ ಸಹೋದರನ ಸಮಾಧಿಯಿಂದಲ್ಲ. ಆಕೆಯ ಕರ್ಮಗಳ ಲೆಕ್ಕ ಸಮರ್ಪಿಸುವಾಗ, ನನ್ನ ಧರ್ಮದ ಬಗ್ಗೆ ನನ್ನ ಪತಿಯೊಡನೆ ಕೇಳಿರೆಂದು ಜಾರಿಕೊಳ್ಳುವಂತಿಲ್ಲ. ಆಕೆಯ ಜೀವನ ಶೈಲಿಗೆ ಆಕೆಯೇ ಹೊಣೆಗಾರಳು. ಆಕೆ ಹೇಗೆ ಆಲೋಚಿಸಿದಳು, ಯಾವ ರೀತಿಯಲ್ಲಿ ಬಾಳಿದಳು ಎಂಬಿತ್ಯಾದಿಗಳ ಕುರಿತು ಅಲ್ಲಾಹನ ಮುಂದೆ ಸ್ವತಃ ಉತ್ತರಿಸಬೇಕಾಗುವುದು. ಅದೇ ಪ್ರಶ್ನೆಗಳನ್ನು ನಾವು ಮಹಿಳೆಯರ ಮುಂದಿಡುತ್ತೇವೆ. ಪುರುಷರೊಡನೆ ಕೇಳದೆ ಮಹಿಳೆಯರೊಡನೆ ಪ್ರಶ್ನಿಸುತ್ತಿರುವುದಕ್ಕೆ, ಅವರು ಪುರುಷರ ಇಷ್ಟಾರ್ಥವನ್ನು ಲೆಕ್ಕಿಸದೆ ತಮ್ಮ ಜೀವನದ ಬಗ್ಗೆ ತಾವೇ ನಿರ್ಧಾರ ಕೈಗೊಳ್ಳಬೇಕೆಂಬುದೇ ಕಾರಣವಾಗಿದೆ. ಇಸ್ಲಾಮ್ ನಿಮ್ಮ ಜೀವನ ಮಾರ್ಗವೆಂಬ ನೆಲೆಯಲ್ಲಿ ನಿಮಗೆ ಸ್ವೀಕಾರಾರ್ಹವಾಗಿದೆಯೇ? ಅದರ ಮೂಲಾಧಾರಗಳು, ಕಾನೂನು ಮಿತಿಗಳು, ಅದು ಜಾರಿಗೊಳಿಸುವ ನಿಬಂಧನೆಗಳು ಅದು ಹೇರುವ ಹೊಣೆಗಾರಿಕೆಗಳು ಇತ್ಯಾದಿಗಳನ್ನು ಪರಿಶೀಲಿಸಿದ ಬಳಿಕ ಅದು ನಿಮಗೆ ಅಂಗೀಕಾರಾರ್ಹವೇ ಎಂದು ತೀರ್ಮಾನಿಸಿರಿ! ಹೀಗೆ ಇಸ್ಲಾಮ್ ಪರಿಪೂರ್ಣವಾಗಿ ನಿಮಗೆ ಸ್ವೀಕಾರಾರ್ಹವೆಂದಾದರೆ ಮುಕ್ತ ಮನಸ್ಸಿನಿಂದ ಅದನ್ನು ಅನುಸರಿಸಿರಿ. ಆಂಶಿಕವಾಗಿಯಲ್ಲ, ಸಂಪೂರ್ಣವಾಗಿ ಇಸ್ಲಾಮನ್ನು ನಿಮ್ಮ ಧರ್ಮವಾಗಿ ಅಂಗೀಕರಿಸಿರಿ. ಪ್ರಜ್ಞಾಪೂರ್ವಕ ಅದರಿಂದ ವ್ಯತಿಚಲಿಸಬೇಡಿರಿ. ಅಥವಾ ಒಂದು ವೇಳೆ ನಿಮಗೆ ಸ್ವೀಕಾರಾರ್ಹವಲ್ಲವೆಂದಾದರೆ ಅದರ ಹೆಸರಲ್ಲಿ ಅನರ್ಹವಾದ ಕಾರ್ಯಲಾಭಕ್ಕಾಗಿ ಪ್ರಯತ್ನಿಸದೆ ಸಂಪೂರ್ಣವಾಗಿ ಮತ್ತು ಬಹಿರಂಗವಾಗಿ ಅದನ್ನು ತೊರೆಯಿರಿ, ಅದುವೇ ಭೂಷಣ.

ಈ ವಿಷಯವನ್ನು ಸುದೀರ್ಘ ಕಾಲದಿಂದ ನಾವು ಹೇಳುತ್ತಿದ್ದೇವೆ. ನಿಮಗೆ ನಮ್ಮ ಸಾಹಿತ್ಯಗಳ ಪರಿಚಯವಿದ್ದರೆ- ನೀವು ಅವುಗಳನ್ನು ಓದಿದ್ದರೆ- ನಿಮಗೆ ತಿಳಿದಿರಬಹುದು. ನಾವು ನಮ್ಮ ಸದಸ್ಯರು ಮತ್ತು ಕಾರ್ಯಕರ್ತರಿಗೆ ಸದಾ ಉಪದೇಶಿಸುತ್ತಿರುವುದೇನೆಂದರೆ, ಮನೆಯ ಮಹಿಳೆಯರಿಗೂ ತಾಯಿ, ಸೋದರಿ, ಪತ್ನಿ, ಪುತ್ರಿಯರೆಲ್ಲರಿಗೂ ಇಸ್ಲಾಮಿನ ಬಗ್ಗೆ ಬೋಧಿಸಬೇಕು. ಆದರೆ, ನಿಮ್ಮ ಅಧಿಕಾರಶಕ್ತಿ ಬಳಸಿ ಮಹಿಳೆಯರನ್ನು ನಮ್ಮ ಆದರ್ಶದೆಡೆಗೆ ಬಲಾತ್ಕರಿಸದೆ ಅವರಿಗೆ ಆಲೋಚಿಸುವ, ಗ್ರಹಿಸುವ, ಅಭಿಪ್ರಾಯ ವ್ಯಕ್ತಪಡಿಸುವ ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು. ಇಸ್ಲಾಮಿನ ಬೇಡಿಕೆಗಳನ್ನು ಮಹಿಳೆಯರ ಮುಂದಿಡಬೇಕು. ತರುವಾಯ ಅದನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಅವಕಾಶವನ್ನು ಅವರಿಗೆ ಬಿಡಬೇಕು- ಕೇವಲ ಇದು ಮಾತ್ರ ಸಂದೇಶ ಪ್ರಚಾರಕನ ಕರ್ತವ್ಯವಾಗಿದೆ.

ನಿಮ್ಮ ಕರ್ತವ್ಯಗಳು

ಹೀಗೆ ಸ್ವತಃ ಆಲೋಚಿಸಿ, ಮನಗಂಡು ಇಸ್ಲಾಮನ್ನು ತಮ್ಮ ಧರ್ಮವೆಂದು ಅಂಗೀಕರಿಸಿದ ಸಹೋದರಿಯರ ಕರ್ತವ್ಯವನ್ನು ನಾನು ವಿವರಿಸ ಬಯಸುತ್ತೇನೆ-

ಪ್ರಥಮ ಕರ್ತವ್ಯ

ಜೀವನವನ್ನು ಇಸ್ಲಾಮಿನ ಚೌಕಟ್ಟಿನಲ್ಲಿ ಕಟ್ಟಿಬೆಳೆಸಬೇಕು. ಜೀವನದಿಂದ ಪ್ರತಿಯೊಂದು ಇಸ್ಲಾಮೇತರ ಅಂಶಗಳನ್ನು ಹೆಕ್ಕಿ ಹೊರ ಹಾಕಬೇಕು. ಇಸ್ಲಾಮ್ ಮತ್ತು ಇಸ್ಲಾಮೇತರ ವಿಷಯಗಳನ್ನು ಪ್ರತ್ಯೇಕಿಸಿ ತಿಳಿಯುವ ವಿವೇಚನಾ ಶಕ್ತಿಯನ್ನು ಗಳಿಸಬೇಕು. ತರುವಾಯ ನಿಮ್ಮ ಜೀವನದಲ್ಲಿ ಇಸ್ಲಾಮೇತರ ಅಂಶವೇನಾದರೂ ಉಳಿದಿದೆಯೇ ಎಂದು ನಿಷ್ಕಳಂಕವಾಗಿ ಆತ್ಮಶೋಧನೆ ನಡೆಸಬೇಕು. ಅಂತಹ ಏನಾದರೂ ಕಂಡು ಬಂದರೆ ಕೂಡಲೇ ಆ ಮಾಲಿನ್ಯಗಳಿಂದ ಜೀವನವನ್ನು ಶುದ್ಧಗೊಳಿಸಬೇಕು. ನಿಮ್ಮ ವಿಚಾರ-ದೃಷ್ಟಿಕೋನ, ಗುಣ-ನಡತೆ ಮಾತ್ರವಲ್ಲ ಜೀವನದ ಎಲ್ಲ ಸಂಪ್ರದಾಯಗಳನ್ನೂ ಧರ್ಮಾಧಾರಿತಗೊಳಿಸಬೇಕು. ಇದು ನಿಮ್ಮ ಪ್ರಥಮ ಕರ್ತವ್ಯ.

ದ್ವಿತೀಯ ಕರ್ತವ್ಯ

ಮನೆಯ ವಾತಾವರಣವನ್ನು ಪರಿಶುದ್ಧಗೊಳಿಸಬೇಕು. ಮನೆಯ ಹಳೆಯ ಹಾಗೂ ಹೊಸ ವಾತಾವರಣದಲ್ಲಿ ಅಂಟಿಕೊಂಡಿರುವ ಎಲ್ಲ ಇಸ್ಲಾಮೇತರ ಆಚಾರಗಳನ್ನೂ ಕಿತ್ತೆಸೆಯಬೇಕು. ಈ ಕಾಲದಲ್ಲಿ ನಮ್ಮ ಮನೆಗಳಲ್ಲಿ ಹಳೆಯ ಕಾಲದ ಜಾಹಿಲಿಯ್ಯತ್ (ಅಜ್ಞಾನ) ಮತ್ತು ಹೊಸ ಕಾಲದ ಜಾಹಿಲಿಯ್ಯತ್‌ಗಳ ಒಂದು ಮಿಶ್ರಣ ಕಾಣಿಸುತ್ತಿದೆ. ಒಂದೆಡೆಯಲ್ಲಿ ನಮ್ಮ ಮಹಿಳೆಯರನ್ನು ಪಾಶ್ಚಾತ್ಯ ಮಾದರಿಗೊಳಿಸುವ ಸುಧಾರಣೆಗಳು ನಡೆಯುತ್ತಿದೆ. ಇನ್ನೊಂದೆಡೆಯಲ್ಲಿ ನಮ್ಮ ಕುಟುಂಬ ಜೀವನದಲ್ಲಿ ಈ ಸುಧಾರಣೆಗಳೊಂದಿಗೆ ಹಳೆಯ ಜಾಹಿಲಿಯ್ಯಾ ಕಾಲದ ಧೋರಣೆಗಳೂ ಶಿರ್ಕ್‌ಯುಕ್ತವಾದ ವಿಶ್ವಾಸಗಳೂ ಇಸ್ಲಾಮೇತರ ಆಚಾರಗಳೂ ಉಳಿದು ಕೊಂಡಿವೆ. ಒಟ್ಟಿನಲ್ಲಿ ತಮ್ಮ ಮನೆಗಳಲ್ಲಿರುವ ಹಳೆಯ ಜಾಹಿಲಿಯ್ಯಾ ಆಚಾರಗಳನ್ನೂ ಐರೋಪ್ಯ ವೈಜ್ಞಾನಿಕ ಸಂಸ್ಕೃತಿಯೊಡನಿರುವ ಅಂಧಾನುಕರಣೆಯಿಂದ ನುಸುಳಿಕೊಂಡಿರುವ ಹೊಸ ಜಾಹಿಲಿಯ್ಯಾ ಸಂಪ್ರದಾಯಗಳನ್ನೂ ಒಟ್ಟಿಗೆ ಕೊನೆಗೊಳಿಸಬೇಕಾದುದು, ಈಮಾನಿನ ಬೇಡಿಕೆಗಳ ಪ್ರಜ್ಞೆ ಮೂಡಿರುವ ಮಹಿಳೆಯರ ಕರ್ತವ್ಯವಾಗಿದೆ.

ತೃತೀಯ ಕರ್ತವ್ಯ

ಮಕ್ಕಳಿಗೆ ಇಸ್ಲಾಮೀ ಶಿಕ್ಷಣ-ತರಬೇತಿ ನೀಡುವುದು ನಿಮ್ಮ ತೃತೀಯ ಕರ್ತವ್ಯವಾಗಿದೆ. ನಮ್ಮ ಎಳೆ ಪೀಳಿಗೆಯು ಈ ವಿಷಯದಲ್ಲಿ ಬಹಳ ದೌರ್ಭಾಗ್ಯವಂತರಾಗಿದ್ದಾರೆ. ಅವರ ಮನೆಯೊಳಗೆ ಕುರ್‌ಆನಿನ ಸ್ವರ ಕೇಳಿಸುವುದಿಲ್ಲ. ಮನೆಯಲ್ಲಿರುವವರು ನಮಾಝ್ ಮಾಡುವ ದೃಶ್ಯ ಅವರ ಕಣ್ಣಿಗೆ ಬೀಳುವುದಿಲ್ಲ. ನಮ್ಮ ಸ್ಥಿತಿ ಹೀಗಿರಲಿಲ್ಲ. ನಮ್ಮ ಬಾಲ್ಯ ಕಾಲದಲ್ಲಿ ಮನೆಯಲ್ಲಿ ಕುರ್‌ಆನಿನ ಧ್ವನಿಯನ್ನು ನಾವು ಆಲಿಸುತ್ತಿದ್ದೆವು. ಹಿರಿಯರು ನಮಾಝ್

ಮಾಡುವುದನ್ನು ನಾವು ನೋಡಿದ್ದೆವು. ನಮ್ಮ ಪರಿಸರಗಳಲ್ಲಿ ಧರ್ಮದ ಕುರುಹುಗಳು ಸ್ವಲ್ಪವಾದರೂ ಉಳಿದಿದ್ದುವು. ಆ ವಿಷಯದಲ್ಲಿ ನಾವು ಭಾಗ್ಯಶಾಲಿಗಳಾಗಿದ್ದೆವು. ಆದರೆ ಹೊಸ ಪೀಳಿಗೆಯ ಈ ದುರವಸ್ಥೆಯು ಇಂದು ಅದರ ಪರಾಕಾಷ್ಠೆಗೆ ತಲಪಿದೆ. ಅವರು ಬೆಳೆಯುತ್ತಿರುವ ಮನೆಯ ವಾತಾವರಣದಲ್ಲಿ ಕುರ್‌ಆನಿನ ಧ್ವನಿ ಮೊಳಗುವುದಿಲ್ಲ. ನಮಾಝ್‌ನ ದೃಶ್ಯ ಕಾಣಿಸುವುದಿಲ್ಲ. ನಮ್ಮ ಮನೆಗಳ ಸ್ಥಿತಿ ಹೀಗೆಯೇ ಮುಂದುವರಿದರೆ, ಎಳೆ ಪೀಳಿಗೆಗೆ ಈ ರೀತಿಯ ಕೆಟ್ಟ ತರಬೇತಿ ಲಭಿಸುತ್ತಲಿದ್ದರೆ, ಜೀವನದ ಕಡಿವಾಣವು ಅವರ ಕೈ ಸೇರಿದಾಗ ಇಸ್ಲಾಮಿನ ಹೆಸರು ಕೂಡಾ ಅವರಲ್ಲಿ ಉಳಿದಿರಲಾರದು. ಈ ದುಃಸ್ಥಿತಿಯನ್ನು ನೀವು ಕೊನೆಗೊಳಿಸಬೇಕು. ಮನೆಯ ಸಾಮೂಹಿಕ ಜೀವನ, ದಿನಚರ್ಯೆ, ಜೀವನದ ಎಲ್ಲ ಚಟುವಟಿಕೆಗಳಲ್ಲಿಯೂ ಇಸ್ಲಾಮ್ ಸದಾ ಶೋಭಿಸುತ್ತಿರಲಿ. ಅದು ನಮ್ಮ ಮಕ್ಕಳ ಕಣ್ಣ ಮುಂದೆ ಸಕ್ರಿಯವಾಗಿ ಪ್ರತ್ಯಕ್ಷಗೊಳ್ಳಲಿ. ಮಕ್ಕಳು ಅದನ್ನು ಕಣ್ಣಾರೆ ನೋಡಿ ಅದರ ರುಚಿ ಸವಿದು ಅದರ ಫಲಗಳನ್ನು ಮೈಗೂಡಿಸಲಿ. ಅವರ ಕಿವಿಗಳಲ್ಲಿ ಕುರ್‌ಆನಿನ ಧ್ವನಿ ಮೊಳಗಲಿ. ಅನುದಿನ ಐದು ಬಾರಿಯ ನಮಾಝನ್ನು ಅವರು ನೋಡಲಿ. ಹೀಗೆ ಅವರ ನೈಸರ್ಗಿಕ ಅಭಿರುಚಿಯಂತೆ ಅವರು ಹಿರಿಯರನ್ನು ಅನುಕರಿಸಲಿ. ತೌಹೀದ್‌ನ ಧ್ವನಿಯು ಅವರಿಂದ ಕೇಳಿಸುವಂತಾಗಲಿ, ಸರಿಯಾದ ಶಿಸ್ತಿನ ಗುಣಗಳನ್ನು ಅವರು ಗ್ರಹಿಸಲಿ, ಇಸ್ಲಾಮಿನ ಚಿತ್ರವು ಅವರ ಹೃದಯದಲ್ಲಿ ಮೂಡಲಿ, ಅವರ ಚರ್ಯೆಗಳು ಪರಿಶುದ್ಧವಾಗಲಿ, ಅವರ ಹೃದಯಗಳಲ್ಲಿ ಇಸ್ಲಾಮೀ ಸ್ಫೂರ್ತಿ ಬೆಳೆಯಲಿ. ಎಳೆ ಪೀಳಿಗೆಗಾಗಿ ಇವೆಲ್ಲವನ್ನು ಮಾಡಬೇಕಾದುದು ನಮ್ಮ ಕಡ್ಡಾಯ ಕರ್ತವ್ಯವಾಗಿದೆ. ಆದ್ದರಿಂದ ಇಸ್ಲಾಮ್ ಸ್ವೀಕರಿಸಿರುವ ಎಲ್ಲ ಮಹಿಳೆಯರಿಗೂ ಈ ಬೇಡಿಕೆಗಳ ಈಡೇರಿಕೆಗಾಗಿ - ಒಂದು ಮುಸ್ಲಿಮ್ ಪೀಳಿಗೆಯ ವೃದ್ಧಿಗಾಗಿ - ತಮ್ಮ ಮನೆ ಮತ್ತು ಮಡಿಲನ್ನು ಇಸ್ಲಾಮೀಕರಿಸುವುದು ಕಡ್ಡಾಯವಾಗಿದೆ.

ಚತುರ್ಥ ಕರ್ತವ್ಯ

ಮನೆಯ ಪುರುಷರ ಮೇಲೆ ಪ್ರಭಾವ ಬೀರಬೇಕು. ನಿಮ್ಮ ಪತಿ, ಪಿತ, ಪುತ್ರ, ಸಹೋದರರನ್ನು ನಿಮ್ಮ ಇಸ್ಲಾಮೀ ಜೀವನದೆಡೆಗೆ ಆಮಂತ್ರಿಸಬೇಕು. ಮಹಿಳೆಯರಿಗೆ ಪುರುಷರ ಮೇಲೆ ಪ್ರಭಾವ ಬೀರಲು ಸಾಧ್ಯವಿಲ್ಲವೆಂಬ ತಪ್ಪು ಭಾವನೆ ಅವರಲ್ಲಿ ಹೇಗೋ ಸೇರಿಕೊಂಡಿದೆ. ವಸ್ತುತಃ ಮಹಿಳೆಯರಿಗೆ ಪುರುಷರ ಮೇಲೆ ಗಾಢ ಪ್ರಭಾವ ಬೀರಲು ಸಾಧ್ಯವಿದೆ. ನಮಗೆ 'ಕ್ರುಶ್ಚೇವ್' ಮತ್ತು 'ಕೆನೆಡಿ'ಯ ಪ್ರತಿರೂಪಗಳು ಬೇಕಾಗಿಲ್ಲ. ನಾವು ಪ್ರವಾದಿ ಮುಹಮ್ಮದ್(ಸ) ಮತ್ತು ಅಬೂಬಕರ್‌ರ(ರ) ಮಾದರಿಯನ್ನು ಮೆಚ್ಚುತ್ತೇವೆಂದು ಯುವತಿಯರು ಹೇಳಿದರೆ ಅದು ಮುಸ್ಲಿಮ್ ಯುವಕರ ಜೀವನವನ್ನು ಎಷ್ಟೊಂದು ಕ್ಷಿಪ್ರವಾಗಿ ಬದಲಾಯಿಸುವುದೆಂಬುದನ್ನು ನೀವು ನೋಡಬಹುದು. ಕರಿದೊರೆಗಳ ಜೀವನ ಕ್ರಮ ನಮಗೆ ಬೇಕಾಗಿಲ್ಲ. ನಮಾಝ್, ಉಪವಾಸ, ಭಯಭಕ್ತಿ ಇಸ್ಲಾಮೀ ಆಚಾರ-ವಿಚಾರ ಎಂಬೀ ಸದ್ಗುಣಗಳ ಸಮಾಹಾರವಾಗಿರುವ ಜೀವನವನ್ನು ನಾವು ಬಯಸುತ್ತೇವೆಂದು ಮಹಿಳೆಯರು ಹೇಳಿದರೆ, ಪುರುಷರ ಜೀವನದಲ್ಲಾಗುವ ಮಾರ್ಪಾಟನ್ನು ಅವರಿಗೆ ನೋಡಬಹುದು.

ಹರಾಮ್ ಸಂಪಾದನೆಗಳಿಂದ ನಿರ್ಮಿಸಿದ ಭವ್ಯ ಮನೆಗಳೂ ಲಂಚದ ಹಣ ಪಡೆಯುವ ಸುಖ ಜೀವನವನ್ನೂ ನಾವು ಸಹಿಸುವುದಿಲ್ಲ. ತದ್ವಿರುದ್ಧವಾಗಿ ಹಲಾಲ್ ರೀತಿಯಿಂದ ದೊರೆಯುವ ತುಚ್ಛ ಸಂಪಾದನೆಯಿಂದ ಒಣ ರೊಟ್ಟಿ ತಿಂದು, ಸಣ್ಣ ಗುಡಿಸಲಿನಲ್ಲಿ ವಾಸಿಸುವುದನ್ನೇ ನಾವು ಹೆಚ್ಚು ಇಷ್ಟಪಡುತ್ತೇವೆಂದು ಮಹಿಳೆಯರು ತಮ್ಮ ಪತಿಯರೊಡನೆ ಹೇಳಿದರೆ ನಿಷಿದ್ಧ ಸಂಪಾದನೆಯ ಅನೇಕ ಮಾರ್ಗಗಳು ಮುಚ್ಚಿ, ಪ್ರಚಲಿತವಿರುವ ಅನೇಕ ಕೆಡುಕುಗಳು ಮಾಯವಾಗಬಹುದು.

ಹೀಗೆ, ಇಸ್ಲಾಮನ್ನು ತಮ್ಮ ಜೀವನ ಪದ್ಧತಿಯಾಗಿ ಅಂಗೀಕರಿಸಿರುವ ಎಲ್ಲ ಮಹಿಳೆಯರೂ ತಮ್ಮ ಪರಿಸರದ ಸಂಸ್ಕರಣೆಗೆ ತೊಡಗಿದರೆ, ಆಪ್ತೇಷ್ಟರನ್ನೂ ಕುಟುಂಬ ಸಂಬಂಧಿಕರನ್ನೂ ನೆರೆಕರೆಯವರನ್ನೂ ಪರಿಚಯಸ್ಥರನ್ನೂ ನಾನಾ ರೀತಿಯ ಕೆಡುಕುಗಳಿಂದ ಪಾರುಗೊಳಿಸಬಹುದು. ಅವರಿಂದ ಹಳೆಯ ಮತ್ತು ಹೊಸ ಮೂಢನಂಬಿಕೆ ಮತ್ತು ಕಂದಾಚಾರಗಳನ್ನು ನಿರ್ಮೂಲನಗೊಳಿಸಬಹುದು. ನಿಮ್ಮ ಸಂಬಂಧಿಕರು ಮತ್ತು ಪರಿಚಯಸ್ಥರ ಮುಂದೆ ಇಸ್ಲಾಮೇತರ ಆಚಾರಗಳನ್ನು ವಿಮರ್ಶಿಸಬೇಕು. ಇಸ್ಲಾಮೀ ವಿಧಿನಿಯಮಗಳನ್ನು ಅವರಿಗೆ ಮನವರಿಕೆ ಮಾಡಿಸಿಕೊಡಬೇಕು. ಇಸ್ಲಾಮೀ ಕಾನೂನುಗಳ ಮಿತಿಯ ಕುರಿತು ಜಾಗೃತಗೊಳಿಸಬೇಕು, ಸ್ವಯಂ ಇಸ್ಲಾಮೀ ಜೀವನ ಸಾಗಿಸಿ ಅದರ ನೈಜ ಮಾದರಿಯನ್ನು ಸಮರ್ಪಿಸಬೇಕಾದುದು ನಿಮ್ಮ ಕಡ್ಡಾಯ ಕರ್ತವ್ಯವಾಗಿದೆ. ಹೀಗೆ ಮಾಡಿದರೆ ನಮ್ಮ ಇಡೀ ಸಮುದಾಯವನ್ನು ಉತ್ತಮ ಪಡಿಸಲು ನಮಗೆ ಸಾಧ್ಯವಿದೆ.

ನಿರ್ಣಾಯಕ ಪ್ರಶ್ನೆ

ನೀವು ನಿಜವಾಗಿಯೂ ಇಸ್ಲಾಮಿನಿಂದ ಸಂತೃಪ್ತರಾಗಿದ್ದರೆ, ನಿಮ್ಮ ಖಚಿತ ಉತ್ತರಕ್ಕಾಗಿ ಕಾಯುತ್ತಿರುವ ಪ್ರಶ್ನೆಯೊಂದು ಇದೋ ಎದ್ದು ನಿಂತಿದೆ. ಜಾಹಿಲಿಯ್ಯತ್ತನ್ನು ಅನುಸರಿಸಿ ಇಸ್ಲಾಮನ್ನು ಧಿಕ್ಕರಿಸುತ್ತಿರುವ ನಿಮ್ಮ ಪತಿಯಂದಿರ ತಪ್ಪು ಧೋರಣೆಯನ್ನು ನೀವು ಬೆಂಬಲಿಸಲು ಸಿದ್ಧರಿದ್ದೀರಾ? ಎಂಬುದೇ ಆ ಪ್ರಶ್ನೆ. ನೀವು ನಿಜವಾಗಿಯೂ ಇಸ್ಲಾಮಿನಿಂದ ಸಂತೃಪ್ತರಾಗಿದ್ದರೆ ಈ ಪ್ರಶ್ನೆಗೆ ಸಕಾರಾತ್ಮಕ ಉತ್ತರ ನೀಡಬೇಕಾದುದು ನಿಮ್ಮ ಕರ್ತವ್ಯವಾಗಿದೆ. ಇತರರ ಐಹಿಕ ಸುಖಕ್ಕಾಗಿ ನಿಮ್ಮ ಪರಲೋಕ ಸುಖವನ್ನು ಸ್ವತಃ ಬಲಿ ನೀಡುವುದು ನಿಮಗೆ ಯೋಗ್ಯವಲ್ಲ. ಈ ಕುರಿತು ಪ್ರವಾದಿಯವರು(ಸ) ಹೀಗೆಂದಿದ್ದಾರೆ:

'ಇತರರ ಇಹಲೋಕಕ್ಕಾಗಿ ತನ್ನ ಪರಲೋಕವನ್ನು ವ್ಯರ್ಥಗೊಳಿಸಿದಾತನಿಗಿಂತ ಶೋಚನೀಯ ಸ್ಥಿತಿ ಅಂತ್ಯದಿನದಲ್ಲಿ ಇನ್ನಾರಿಗೂ ಇರಲಾರದು.'

ಆದ್ದರಿಂದ, ನಿಮ್ಮ ಪುರುಷರಿಗೆ ಲೌಕಿಕ ಸುಖ ನೀಡುವ ಪ್ರಯತ್ನದಲ್ಲಿ ನಿಮ್ಮ ಪರಲೋಕ ಸುಖವನ್ನು ನಾಶಪಡಿಸಲು ನೀವು ಸರ್ವಥಾ ಸಿದ್ಧರಾಗಬೇಡಿರಿ.

ಮುಸ್ಲಿಮ್ ಮಹಿಳೆಯರೆಂಬ ನೆಲೆಯಲ್ಲಿ ನಿಮ್ಮ ಪತಿ, ತಂದೆ, ಪುತ್ರರು ಮತ್ತು ಸಹೋದರರು ಹೀಗೆ ಪ್ರತಿಯೊಬ್ಬರೊಡನೆಯೂ ನೀವು ಹೀಗೆ ಸ್ಪಷ್ಟವಾಗಿ ಹೇಳಬೇಕು: "ಇಸ್ಲಾಮನ್ನು ಅನುಸರಿಸುವ ವಿಷಯದಲ್ಲಿ ನಿಮ್ಮೊಂದಿಗೆ ಸಹಕರಿಸಲು ನಾವು ಸಿದ್ಧರಿದ್ದೇವೆ.

ಆದರೆ, ಇಸ್ಲಾಮೀ ಕಾನೂನುಗಳನ್ನು ಪಾಲಿಸಲು ಸಾಧ್ಯವಿಲ್ಲದಿದ್ದರೆ ನೀವು ನಿಮ್ಮ ದಾರಿಯಲ್ಲಿ ಹೋಗಿ ಬಿಡಿರಿ, ನಮಗೆ ಆ ವಿಷಯದಲ್ಲಿ ನಿಮ್ಮೊಡನೆ ಸಹಕರಿಸಲು ಸಾಧ್ಯವಿಲ್ಲ. ನಿಮ್ಮ ಲೌಕಿಕ ಸುಖಕ್ಕಾಗಿ ನಮ್ಮ ಪಾರತ್ರಿಕ ಜೀವನವನ್ನು ಅಡಿಮೇಲು ಗೊಳಿಸಲು ನಾವು ಖಂಡಿತ ಸಿದ್ಧರಿಲ್ಲ."

ಇನ್ನೊಂದೆಡೆಯಲ್ಲಿ, ಅಲ್ಲಾಹ್ ಮತ್ತು ಪ್ರವಾದಿಯವರನ್ನು(ಸ) ಅನುಸರಿಸುವಂಥ ಪತಿ, ತಂದೆ, ಸಹೋದರರು ಮತ್ತು ಪುತ್ರರಿರುವ ಸ್ತ್ರೀಯರು, ಅವರೊಡನೆ ಸಂಪೂರ್ಣ ಸೌಹಾರ್ದದಿಂದ ಹಾಗೂ ಸಂಕಷ್ಟಗಳನ್ನು ಪರಸ್ಪರ ಸಹಿಸಿ ಬಾಳಬೇಕಾದುದು ಕಡ್ಡಾಯವಾಗಿದೆ. ಇಸ್ಲಾಮೀ ಕಾನೂನುಗಳನ್ವಯ ಬಾಳಲು ನಿರ್ಧರಿಸಿದವರಿಗೆ ಧನ ಸಂಪಾದನೆಗಾಗಿ ಸಿಕ್ಕಾಪಟ್ಟೆ ಕೈಹಾಕಲು ಸಾಧ್ಯವಿಲ್ಲವೆಂಬುದು ಸುಸ್ಪಷ್ಟ ವಾಸ್ತವಿಕತೆಯಾಗಿದೆ. ಅವರಿಗೆ ಹರಾಮನ್ನು ತಿನ್ನಲು ಎಂದಿಗೂ ಸಾಧ್ಯವಿಲ್ಲ. ಹಲಾಲ್ ಮಾರ್ಗದಿಂದ ಸೀಮಿತ ಹಣ ಸಂಪಾದಿಸಿ ಸುಖಭೋಗದ ಜೀವನ ಸವಲತ್ತುಗಳನ್ನು ಒದಗಿಸಲೂ ಅವರಿಂದ ಸಾಧ್ಯವಿಲ್ಲ. ಆದ್ದರಿಂದ ಮುಸ್ಲಿಮ್ ಮಹಿಳೆಯರು, ಧರ್ಮಬದ್ಧ ಮಾರ್ಗದಿಂದ ದೊರೆಯುವ ಅಲ್ಪ ಸಂಪಾದನೆಯಿಂದ ಸಂತೃಪ್ತರಾಗಬೇಕಾಗಿದೆ. ಅವರು ಇಸ್ಲಾಮೀ ಹಾದಿಯಲ್ಲಿ ಸಂಚರಿಸುತ್ತಿರುವ ಪತಿ, ತಂದೆ, ಸಹೋದರರು ಮತ್ತು ಪುತ್ರರ ಹೆಗಲ ಮೇಲೆ ನಮಗೆ ಯಾವಾಗಲೂ ಸುಖ-ಸಂತೋಷ ಮತ್ತು ರುಚಿಕರ ಭಕ್ಷ್ಯಪದಾರ್ಥಗಳೇ ನೀಡಬೇಕೆಂಬ ಭಾರವನ್ನು ಹೊರಿಸಬಾರದು. ಹಾಗೆಯೇ ಸತ್ಯಧರ್ಮವನ್ನು ಪಾಲಿಸಿ ಅದನ್ನು ಸಂಸ್ಥಾಪಿಸುವ ಪ್ರಯತ್ನದಲ್ಲಿ ಪುರುಷರು ಬಹಳಷ್ಟು ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ತಮ್ಮ ಸತ್ಯನಿಷ್ಠರಾದ ಪತಿಯಂದಿರ ಸಂಕಷ್ಟಗಳಲ್ಲಿ ಸಹಭಾಗಿಗಳಾಗಿ ನಾವು ನೈಜ ಸಹಧರ್ಮಿಣಿಯರೆಂದು ಸಾಬೀತು ಪಡಿಸುವ ಹೊಣೆಯೂ ಮುಸ್ಲಿಮ್ ಮಹಿಳೆಯರಿಗಿದೆ.

****

ಧರ್ಮ ಸೇವೆಯಲ್ಲಿ ಮಹಿಳೆಯರ ಸಹಕಾರ

ಮೌ| ಸೈಯದ್ ಅಬುಲ್ ಆಲಾ ಮೌದೂದಿ

(ಟೋಂಕ್‌ನಲ್ಲಿ ಜರುಗಿದ ಸಮ್ಮೇಳನದಲ್ಲಿ ಮಹಿಳೆಯರನ್ನುದ್ದೇಶಿಸಿ ಮಾಡಿದ ಭಾಷಣ)

ಪ್ರಿಯ ಸಹೋದರಿಯರೇ! ಇಸ್ಲಾಮೀ ಆಂದೋಲನವು ಇಲ್ಲಿ ಮಹಿಳೆಯರಲ್ಲಿಯೂ ಪ್ರಭಾವ ಬೀರಿದೆ ಮತ್ತು ನೀವು ಸಂದೇಶ ಪ್ರಚಾರಕ್ಕಾಗಿ ನಿಮ್ಮ ಸ್ವಂತ ಶಾಖೆಯನ್ನು ಸ್ಥಾಪಿಸಿರುವಿರೆಂದು ತಿಳಿದು ತುಂಬಾ ಸಂತೋಷವಾಯಿತು. ನಮ್ಮ ಈ ಚಟುವಟಿಕೆಯಲ್ಲಿ ಪುರುಷರಂತೆಯೇ ಮಹಿಳೆಯರ ಸಹಕಾರವೂ ಅವಶ್ಯಕವಾಗಿದೆ. ಮಾನವ ಜೀವನದಲ್ಲಿ ನೀವೂ ಸಮಾನ ಭಾಗಿಯಾಗಿರುವಿರಿ. ಜೀವನದಲ್ಲಿ ನಿಮಗೆ ಸಂಬಂಧಿಸಿದ ಅಂಶಗಳು ಪುರುಷರಿಗೆ ಸಂಬಂಧಿಸಿದ ಅಂಶಗಳಿಗಿಂತ ಯಾವ ವಿಧದಲ್ಲಿಯೂ ಕಡಿಮೆಯಿಲ್ಲ. ಗಾಡಿಯ ಎರಡು ಚಕ್ರಗಳಲ್ಲಿ ಒಂದು ಚಕ್ರವು ಇನ್ನೊಂದರ ಜೊತೆಗೆ ಸಹಕರಿಸದಿದ್ದರೆ ಕೇವಲ ಒಂದು ಚಕ್ರವು ಸರಿಯಾಗಿ ಚಲಿಸಲಾರದ ಹಾಗೆಯೇ ಮಹಿಳೆಯರು ಪುರುಷರಂತೆಯೇ ಸಮಾನ ಸಹಕಾರ ನೀಡದಿದ್ದರೆ ಮಾನವನ ಸಾಮಾಜಿಕ ಜೀವನವು ಸರ್ವಥಾ ಸರಿಯಾಗಿ ಮುಂದೆ ಸಾಗಲಾರದು. ಅಲ್ಲಾಹನು ಜೀವನದ ಈ ಗಾಡಿಯನ್ನು ಎರಡು ಚಕ್ರಗಳಲ್ಲಿ ಚಲಿಸುವ ರೀತಿಯಲ್ಲಿ ನಿರ್ಮಿಸಿದ್ದಾನೆ. ಒಂದು ಚಕ್ರವು ನಿಂತರೆ ಅಥವಾ ವಕ್ರವಾಗಿ ಚಲಿಸಿದರೆ ಗಾಡಿಯು ಒಂದೇ ಚಕ್ರದಲ್ಲಿ ಹೆಚ್ಚು ದೂರ ಸಾಗಲಾರದು.

ಈ ವಾಸ್ತವಿಕತೆಯ ಆಧಾರದಲ್ಲಿಯೇ ಎಲ್ಲ ಸಾಮಾಜಿಕ ಆಂದೋಲನಗಳೂ ಮಹಿಳೆಯರ ಸಹಕಾರಕ್ಕೆ ಪ್ರಾಮುಖ್ಯ ನೀಡಲು ನಿರ್ಬಂಧಿತವಾಗಿವೆ. ವಿಶೇಷತಃ ಇಸ್ಲಾಮೀ ಆಂದೋಲನವು ಇದಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡಿದೆ. ಮಾನವನ ಜೀವನ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅಲ್ಲಾಹನು ನೀಡಿದ ನಿಸರ್ಗದನ್ವಯ ಕ್ರಮಬದ್ಧ ಗೊಳಿಸಲು ಇಸ್ಲಾಮ್ ಬಯಸಿರುವುದೇ ಇದಕ್ಕೆ ಕಾರಣ. ಅದಕ್ಕಾಗಿ ಮಹಿಳೆಯರೂ ಪುರುಷರಷ್ಟೇ ಉತ್ತಮರಾಗಬೇಕಾಗಿದೆ. ಅದಕ್ಕೆ ಇನ್ನೊಂದು ಪ್ರಮುಖ ಕಾರಣವೂ ಇದೆ. ಇಸ್ಲಾಮ್ ಯಾರ ದಾಸ್ಯತನದತ್ತ ಆಮಂತ್ರಿಸುತ್ತದೆಯೋ ಆ ದೇವನು ಪುರುಷರ ದೇವನಾಗಿರುವಂತೆಯೇ ಮಹಿಳೆಯರ ದೇವನೂ ಆಗಿದ್ದಾನೆ. ಇಸ್ಲಾಮಿನ ಭಾಷೆಯಲ್ಲಿ ಯಾವುದು ಸತ್ಯಧರ್ಮವಾಗಿದೆಯೋ ಅದು ಪುರುಷರಂತೆಯೇ ಮಹಿಳೆಯರಿಗೂ

ಸತ್ಯಧರ್ಮವೇ ಆಗಿದೆ. ಜೀವನದ ಗುರಿಯಾಗಿರುವ ಪರಲೋಕ ಮೋಕ್ಷವು ಪುರುಷರಂತೆಯೇ ಮಹಿಳೆಯರಿಗೂ ಅತ್ಯವಶ್ಯಕವಾಗಿದೆ. ಯಾವ ನರಕ ಶಿಕ್ಷೆಯಿಂದ ಪಾರಾಗಬೇಕೆಂದು ಇಸ್ಲಾಮ್ ಬಯಸುತ್ತಿದೆಯೋ ಆ ನರಕಾಗ್ನಿಯು ಪುರುಷರಷ್ಟೇ ಮಹಿಳೆಯರಿಗೂ ಭಯಾನಕವಾಗಿದೆ. ಇಸ್ಲಾಮ್ ಸುವಾರ್ತೆ ನೀಡಿರುವ ಆ ಸ್ವರ್ಗ ಲೋಕವು ಪುರುಷರಿಗೆ ತಂತಮ್ಮ ಪರಿಶ್ರಮದಿಂದ ದೊರೆಯುವಂತೆಯೇ ಮಹಿಳೆಯರಿಗೂ ಅವರ ಪ್ರಯತ್ನ ಪರಿಶ್ರಮಗಳಿಂದ ಮಾತ್ರ ಲಭ್ಯವಾಗುವುದು. ಪತ್ನಿ, ಮಾತೆ, ಸಹೋದರಿ ಮುಸ್ಲಿಮರಾಗಿ ಅಲ್ಲಾಹನ ಪ್ರೀತಿಗಾಗಿ ಶ್ರಮಿಸುತ್ತಿದ್ದಾರೆಂಬ ಕಾರಣದಿಂದ ಯಾವ ಪುರುಷನಿಗೂ ರಕ್ಷಣೆ ದೊರೆಯಲಾರದು. ಹಾಗೆಯೇ ಪತಿ, ತಂದೆ, ಸಹೋದರರು ಮುಸ್ಲಿಮರಾಗಿ ದೇವನ ಸಂಪ್ರೀತಿಗಾಗಿ ಕಾರ್ಯಾಚರಿಸುತ್ತಿರುವರೆಂಬ ಕಾರಣದಿಂದ ಯಾವ ಮಹಿಳೆಗೂ ರಕ್ಷಣೆ ದೊರೆಯಲಾರದು. ಆದ್ದರಿಂದ ಸ್ತ್ರೀ ಮತ್ತು ಪುರುಷನು ಏಕಪ್ರಕಾರವಾಗಿ ತಂತಮ್ಮ ರಕ್ಷಣೆಯ ಬಗ್ಗೆ ಆಲೋಚಿಸಬೇಕೆಂದು ಇಸ್ಲಾಮ್ ಒತ್ತಾಯಿಸುತ್ತದೆ. ಪ್ರತಿಯೊಬ್ಬರೂ ತಮ್ಮನ್ನು ಅಲ್ಲಾಹನ ಶಿಕ್ಷೆಯಿಂದ ಪಾರುಗೊಳಿಸುವ ಮತ್ತು ಆತನ ಅನುಗ್ರಹಕ್ಕೆ ಅರ್ಹವಾದ ಸೇವಾ ಕಾರ್ಯಗಳನ್ನು ಮಾಡಬೇಕು. ಇತರರೊಂದಿಗಿನ ಸಂಬಂಧದಿಂದಾಗಿ ನರಕಕ್ಕೆ ಬೀಳುವ ರೀತಿಯಲ್ಲಿ ಮಹಿಳೆ ಮತ್ತು ಪುರುಷನು ಯಾರೊಡನೆಯೂ ಸಂಬಂಧ ಬೆಳೆಸಬಾರದು. ಪುರುಷನಾಗಿರಲಿ, ಮಹಿಳೆಯಾಗಿರಲಿ ಸ್ವಂತ ಮನೆಯಲ್ಲಿ ಧರ್ಮ ಮತ್ತು ವಿಶ್ವಾಸದ ಪ್ರಕಾಶವಿದ್ದರೂ ಅದನ್ನು ಬಳಸದೆ ಕುರುಡರಂತೆ ಜೀವನ ಸಾಗಿಸಬಾರದು.

ಇಸ್ಲಾಮಿ ಆಂದೋಲನದ ಇತಿಹಾಸವು ನಮ್ಮ ಮುಂದಿದೆ. ಆರಂಭ ಕಾಲದಿಂದಲೇ ಈ ಆಂದೋಲನದಲ್ಲಿ ಮಹಿಳೆಯರು ಪುರುಷರ ಜತೆ ಸಹಭಾಗಿಗಳಾಗಿದ್ದರೆಂದು ಅದು ನಮಗೆ ತಿಳಿಸುತ್ತದೆ. ಪ್ರವಾದಿಯವರಲ್ಲಿ ವಿಶ್ವಾಸವಿರಿಸುವ ಭಾಗ್ಯ ಸಿದ್ಧಿಸಿದ ವ್ಯಕ್ತಿ ಓರ್ವ ಮಹಿಳೆಯಾಗಿದ್ದರು. ಅರ್ಥಾತ್, ನಮ್ಮೆಲ್ಲರ ಆದರಣೀಯ ಮಾತೆಯಾಗಿರುವ 'ಖದೀಜತುಲ್‌ಕುಬ್ರಾ'. ಪ್ರವಾದಿತ್ವದ ಭಾರದಿಂದ ಕಂಪಿಸುತ್ತಿದ್ದ ಪ್ರವಾದಿಯವರ ಹೃದಯಕ್ಕೆ ಅವರೇ ಶಾಂತತೆಯನ್ನು ನೀಡಿದ್ದರು. ಎಲ್ಲ ರೀತಿಯ ಕಷ್ಟ, ನಷ್ಟ, ಮರ್ದನಗಳೊಂದಿಗೆ ಹತ್ತು ವರ್ಷಕಾಲ ಅವರೇ ಪ್ರವಾದಿಯವರ ಉತ್ತಮ ಸಖಿಯಾಗಿದ್ದರು. ಮಕ್ಕಾ ಜೀವನ ಕಾಲದಲ್ಲಿ ಅವರ ಸಂಪತ್ತಿನಿಂದಲೇ ಇಸ್ಲಾಮಿನ ಚಟುವಟಿಕೆಗಳನ್ನು ನಡೆಸಲಾಗುತ್ತಿತ್ತು. ಪ್ರವಾದಿತ್ವದ ಮೊದಲ ಮೂರು ವರ್ಷದಲ್ಲಿ 55 ಮಂದಿ ವಿಶ್ವಾಸ ಸ್ವೀಕರಿಸಿದವರ ಪೈಕಿ 9 ಮಹಿಳೆಯರಿದ್ದರು. ಏಳೆಂಟು ವರ್ಷಗಳ ಕಾಲ ತೀವ್ರ ಹಿಂಸೆ ದೌರ್ಜನ್ಯಗಳನ್ನು ಸಹಿಸಿ ಕೊನೆಗೆ ಊರು-ಮನೆಮಾರುಗಳನ್ನು ತೊರೆದು ಅಬಿಸೀನಿಯಾಕ್ಕೆ ವಲಸೆ ಹೋದ 83 ಮಂದಿಯಲ್ಲಿ 18 ಮಂದಿ ಮಹಿಳೆಯರಿದ್ದರು. ಅವರು ಸತ್ಯಧರ್ಮಕ್ಕಾಗಿ ಊರು ತೊರೆದು ಸಂಕಷ್ಟಗಳನ್ನು ಸಹಿಸುವ ನಿಟ್ಟಿನಲ್ಲಿ ತಮ್ಮ ಪತಿ, ಪುತ್ರರು ಮತ್ತು ಸಹೋದರರ ಜತೆಗೂಡಿದರು. ಮಕ್ಕಾದ ಅವಿಶ್ವಾಸಿಗಳಿಂದ ಕ್ರೂರ ಹಿಂಸೆಗಳನ್ನು ಸಹಿಸಿದವರಲ್ಲಿ ಬಿಲಾಲ್ ಮತ್ತು ಅಮ್ಮಾರ್‌ರಂಥ ಪುರುಷರಿದ್ದರೆ ಉಮ್ಮು ಉಬೈಸ್, ಸನೀರಾ ಮತ್ತು ಉಮ್ಮು ಅಮ್ಮಾರ್‌ರಂಥ ಮಹಿಳೆಯರೂ ಇದ್ದರು. ಹಾಗೆಯೇ ಮದೀನಾದಲ್ಲಿ ಅನ್ಸಾರಿ ಪುರುಷರು

ಇಸ್ಲಾಮಿಗಾಗಿ ತ್ಯಾಗಗಳನ್ನು ಅರ್ಪಿಸಿದಾಗ ಮಹಿಳೆಯರೂ ಹಿಂದುಳಿದಿರಲಿಲ್ಲ. ಉಹುದ್ ಯುದ್ಧದಲ್ಲಿ ಪತಿ, ತಂದೆ, ಸಹೋದರ- ಮೂವರೂ ಹುತಾತ್ಮರಾದ ಸುದ್ದಿ ಕೇಳಿದಾಗ, 'ಪ್ರವಾದಿಯವರು ಬದುಕಿದ್ದರೆ ಎಲ್ಲವೂ ತುಚ್ಛ'ವೆಂದು ಹೇಳಿದ ಮಹಾ ಭಾಗ್ಯವತಿಯಾದ ಆ ಮಹಿಳೆಯ ಕಥೆ ನೀವು ಕೇಳಿರಬಹುದು. ಅದೇ ಯುದ್ಧದಲ್ಲಿ ಉಮ್ಮು ಅಮ್ಮಾರ ಎಂಬ ಮಹಿಳೆಯು ನೀರು ತಂದು ಕೊಡುವ ಕೆಲಸ ಮಾಡುತ್ತಿದ್ದರು. ಪ್ರವಾದಿಯವರಿಗೆ ಗಾಯವಾಗಿದೆ. ಅವಿಶ್ವಾಸಿಗಳು ಅವರನ್ನು ಸುತ್ತುವರಿದುದನ್ನು ನೋಡಿದ ಆ ಮಹಿಳೆಯು ಖಡ್ಗ ಹೊರತೆಗೆದು ಪ್ರವಾದಿಯವರ ರಕ್ಷಣೆಗಾಗಿ ಹೋರಾಡಿದರು. ಇದರಿಂದಾಗಿ ಅವರ ತೋಳಿಗೆ ಆಳವಾದ ಗಾಯವಾಗಿತ್ತು. ಇಂತಹ ಅನೇಕ ಘಟನೆಗಳಿಂದ, ಸತ್ಯಧರ್ಮಕ್ಕಾಗಿ ಮಹಿಳೆಯರು, ಪುರುಷರಿಗಿಂತ ಕಿಂಚಿತ್ತೂ ಕಡಿಮೆಯಿಲ್ಲದ ಸೇವೆಗಳನ್ನು ಮಾಡಿದ್ದಾರೆಂದು ಗ್ರಹಿಸಬಹುದು. ಅವರು ಧರ್ಮಕ್ಕಾಗಿ ಮರ್ದನಗಳನ್ನು ಸಹಿಸಿದರು. ಅಪಾಯಗಳನ್ನು ಸ್ವೀಕರಿಸಿದರು. ಪ್ರಾಣ, ಸೊತ್ತು-ವಿತ್ತಗಳನ್ನು ತ್ಯಾಗ ಮಾಡಿದರು. ಆಪ್ತೇಷ್ಟರನ್ನು ತೊರೆದರು. ವಲಸೆ, ಹಸಿವೆ ಮತ್ತು ದಾಹದ ಸಂಕಟಗಳನ್ನು ಸಹಿಸಿದರು. ತಮ್ಮ ಮೂಮಿನರಾದ ತಂದೆ, ಪತಿ, ಸಹೋದರರ ಜತೆ ಸಂಪೂರ್ಣ ನಿಷ್ಠೆ ತೋರಿದರು. ಇದು ನಿಮ್ಮ ಪೂರ್ವಕಾಲದ ಸಹೋದರಿಯರ ಮಹಾ ಕೃತ್ಯಗಳಾಗಿವೆ. ಈ ಎಲ್ಲ ಕಾರಣಗಳಿಂದಾಗಿಯೇ ಆರಂಭ ಕಾಲದಲ್ಲಿ ಇಸ್ಲಾಮ್ ಜಗತ್ತಿನಲ್ಲಿ ಹಬ್ಬಿತ್ತು. ಇಂದು ಇಸ್ಲಾಮ್ ಬೆಳೆಯ ಬೇಕಿದ್ದರೂ ಜಗತ್ತಿನಲ್ಲಿ ಜಯಸಾಧಿಸ ಬೇಕಿದ್ದರೂ ನೀವು ಆ ಸಾಧ್ವಿ ಮಹಿಳೆಯರ ಹೆಜ್ಜೆ ಗುರುತುಗಳನ್ನು ಹಿಂಬಾಲಿಸಬೇಕಾಗಿದೆ. ಅವರಂತಹ 'ಈಮಾನ್' ಮತ್ತು 'ಇಖ್ಲಾಸ್' ಸಾಬೀತು ಪಡಿಸಬೇಕಾಗಿದೆ.

ಇಂದು ಮಹಿಳೆಯರು ಈ ಕೆಳಗಿನ ಕರ್ತವ್ಯಗಳನ್ನು ತುರ್ತಾಗಿ ನಿರ್ವಹಿಸಬೇಕಾಗಿದೆ. ತಮ್ಮ ಮನೆ, ಕುಟುಂಬ, ನೆರೆಕರೆ ಮತ್ತು ಪರಿಚಯಸ್ಥರನ್ನು ಶಿರ್ಕ್, ಜಾಹಿಲಿಯ್ಯತ್ ಮತ್ತು ಅಧರ್ಮಗಳಿಂದ ಮುಕ್ತಗೊಳಿಸಲು ಪ್ರಯತ್ನಿಸಬೇಕು. ಮನೆಯ ಸಾಮೂಹಿಕ ಜೀವನವನ್ನು ಇಸ್ಲಾಮೀಕರಿಸಬೇಕು. ಹಳೆಯ ಜಾಹಿಲಿಯ್ಯತ್ ಮತ್ತು ಹೊಸ ಜಾಹಿಲಿಯ್ಯತ್‌ಗಳ ದುಷ್ಪರಿಣಾಮಗಳಿಂದ ಸ್ವತಃ ಪಾರಾಗಿ ಇತರರನ್ನೂ ಅವುಗಳಿಂದ ಮುಕ್ತಗೊಳಿಸಬೇಕು. ಅಕ್ಷರ ಜ್ಞಾನ ಮತ್ತು ಅವಿದ್ಯಾವಂತ ಮಹಿಳೆಯರಿಗೆ ಧಾರ್ಮಿಕ ಜ್ಞಾನವನ್ನು ನೀಡಬೇಕು. ವಿದ್ಯಾವಂತ ಮಹಿಳೆಯರ ವಿಚಾರಧಾರೆಗಳನ್ನು ಸಂಸ್ಕರಿಸಬೇಕು. ಶ್ರೀಮಂತ ಕುಟುಂಬಗಳಲ್ಲಿ ಸಾಮಾನ್ಯವಾಗಿರುವ ಅಲ್ಲಾಹನ ಬಗೆಗಿನ ನಿರ್ಲಕ್ಷ್ಯವನ್ನು ಹೋಗಲಾಡಿಸಬೇಕು. ಧಾರ್ಮಿಕ ವಿಷಯ ಮತ್ತು ಇಸ್ಲಾಮೀ ತತ್ವಸಿದ್ಧಾಂತಗಳಿಂದ ವಿಮುಖರಾಗುವ ಮಹಾವ್ಯಾಧಿಗಳಿಂದ ಅವರನ್ನು ಮುಕ್ತಗೊಳಿಸಬೇಕು. ತಮ್ಮ ಮಕ್ಕಳನ್ನು ಇಸ್ಲಾಮೀ ಜೀವನದಲ್ಲಿ ಬೆಳೆಸಬೇಕು. ಮನೆಯ ಗಂಡಸರು ಇಸ್ಲಾಮೇತರ ದುರ್ಮಾರ್ಗಗಳಲ್ಲಿ ಸಿಲುಕಿದ್ದರೆ ಅವರನ್ನು ಸನ್ಮಾರ್ಗಕ್ಕೆ ಮರಳಿಸಲು ಪ್ರಯತ್ನಿಸಬೇಕು. ಅವರು ಇಸ್ಲಾಮಿಗಾಗಿ ಸೇವೆ ಸಲ್ಲಿಸುತ್ತಲಿದ್ದರೆ ಅವರಿಗೆ ಸಾಕಷ್ಟು ಸಹಕಾರ ನೀಡಬೇಕು. ಇವೆಲ್ಲವೂ ನಿಮ್ಮ ಹೊಣೆಯಾಗಿದೆ. ಧರ್ಮಕ್ಕಾಗಿ ಇನ್ನು ಮುಂದೆ ನೀವು ಇದಕ್ಕಿಂತ ದೊಡ್ಡ ಸೇವೆಗಳನ್ನು ಮಾಡಬೇಕಾಗಿದೆ. ಅದಕ್ಕೆ ನಿಮ್ಮನ್ನು ಸನ್ನದ್ಧಗೊಳಿಸುವುದಕ್ಕಾಗಿ ಸಂದರ್ಭೋಚಿತ ಕಾರ್ಯಕ್ರಮಗಳನ್ನು ರೂಪಿಸಲಾಗುವುದು (ಇನ್‌ಶಾ

ಅಲ್ಲಾಹ್). ನೀವು ಈಗ ಮಾಡಬೇಕಾದ ಕಾರ್ಯಗಳನ್ನು ಇಲ್ಲಿ ವಿವರಿಸಿದ್ದೇನೆ. ಇವು ಕೇವಲ ನೀವೇ ಮಾಡಬೇಕಾದ ಕಾರ್ಯಗಳಾಗಿವೆ.

ಮಹಿಳೆಯರು ಸ್ವತಃ ಸನ್ಮಾರ್ಗದಲ್ಲಿ ಚಲಿಸುತ್ತಿರುವಾಗ ಮನೆಯ ಪುರುಷರು ಅದಕ್ಕೆ ಅಡ್ಡಿಯಾದರೆ ಬಹಳಷ್ಟು ತೊಂದರೆ ಅನುಭವಿಸಬೇಕಾಗುತ್ತದೆ. ಈ ವಿಷಮಾವಸ್ಥೆಯು ನಿಜವಾಗಿಯೂ ಕಳವಳಕಾರಿಯಾಗಿದೆ. ಆದರೆ, ಇಂತಹ ಪರಿಸ್ಥಿತಿಗಳಲ್ಲಿ ಆರಂಭ ಕಾಲದ ಇಸ್ಲಾಮಿನ ವೀರಮಹಿಳೆಯರು ತೋರಿದ ಮಾದರಿಯನ್ನೇ ನೀವೂ ಅವಲಂಬಿಸಬೇಕಾಗಿದೆ. ನಿಮ್ಮ ಧೋರಣೆಯು ಎಷ್ಟೇ ಅಸಹಾಯಕ ಮತ್ತು ದುರ್ಬಲವಾಗಿದ್ದರೂ ಅದು ಜಾಹಿಲಿಯ್ಯ ಕಾಲದಲ್ಲಿ ಅರೇಬಿಯಾದ ಮಹಿಳೆಯರಲ್ಲಿದ್ದ ಧೋರಣೆಯಷ್ಟು ಅಧಃಪತನಗೊಂಡಿಲ್ಲ. ಹಾಗೆಯೇ ಇಸ್ಲಾಮಿನಿಂದ ವ್ಯತಿಚಲಿಸಿದ ಅಥವಾ ಇಸ್ಲಾಮಿ ಸಂದೇಶ ಪ್ರಚಾರದ ವಿರೋಧಿಗಳಾದ ಸಂಬಂಧಿಕ ಪುರುಷರೊಡನೆ ವ್ಯವಹರಿಸುವ ಪರಿಸ್ಥಿತಿ ಬಂದಿದ್ದರೆ ಅದು ಹಾದಿತಪ್ಪಿದ ಮುಸ್ಲಿಮರೊಂದಿಗಲ್ಲವೇ ಎಂಬ ಸಮಾಧಾನವಿದೆಯಷ್ಟೆ. ಆದರೆ ಅರೇಬಿಯಾದ ಮಹಿಳೆಯರು ಇಸ್ಲಾಮಿನ ಕಡುವೈರಿಗಳಾದ ಸತ್ಯನಿಷೇಧಿಗಳನ್ನು ಎದುರಿಸಬೇಕಾಗಿತ್ತು. ಅಂತಹ ಕಠಿಣ ಪರಿಸ್ಥಿತಿಗಳಲ್ಲಿಯೂ ಆ ಮಹಿಳೆಯರು ಮಾಡಿದ ಧರ್ಮ ಸೇವೆ, ಸ್ವಕುಟುಂಬದವರ ತೀವ್ರ ವಿರೋಧವನ್ನು ಎದುರಿಸಿ, ಸತ್ಯದ ಪ್ರೀತಿಯಿಂದ ಅವರು ತೋರಿದ ಧೈರ್ಯಸ್ಥೈರ್ಯವು ಜಗತ್ತಿನ ಎಲ್ಲ ಕಾಲದ ಮಹಿಳೆಯರಿಗೂ ಮಾದರೀ ಯೋಗ್ಯವಾಗಿದೆ. ಉದಾಹರಣೆಗಾಗಿ ಕೆಲವು ಮಹಿಳೆಯರ ಕುರಿತು ನಿಮಗೆ ತಿಳಿಸುತ್ತೇನೆ:

ಮೊದಲು ಹ.ಖದೀಜಾರನ್ನೇ(ರ) ತೆಗೆದುಕೊಳ್ಳೋಣ. ಅವರ ಕುಟುಂಬದ ಬಹುತೇಕ ಜನರು ಇಸ್ಲಾಮಿನ ಕಡು ವಿರೋಧಿಗಳಾಗಿದ್ದರು. ವಿಶೇಷತಃ ಅವರ ಸ್ವಂತ ಸಹೋದರರು. ನೌಫಲ್ ಚಿಕ್ಕಪ್ಪನ ಮಗ ಅಸ್ವದ್ ಬಿನ್ ಮುತ್ತಲಿಬ್, ಅಸ್ವದ್‌ನ ಪುತ್ರ ಸಂಅತ್‌ರು ಪ್ರವಾದಿಯವರನ್ನು ವಿರೋಧಿಸುತ್ತಿದ್ದ ಅಬೂಜಹಲ್‌ನ ಬಲಗೈ ಬಂಟರಾಗಿದ್ದರು. ಹಾಗಿದ್ದರೂ ಖದೀಜಾರು ಪ್ರವಾದಿಯವರಿಗೆ ಆಶ್ರಯ ಮತ್ತು ಆಸರೆ ನೀಡಿದರು. ಈ ವಿಷಯದಲ್ಲಿ ಅವರು ಮನೆಯವರ ವೈರವನ್ನು ಕಿಂಚಿತ್ತೂ ಲೆಕ್ಕಿಸಲಿಲ್ಲ.

ಹ. ಉಮ್ಮು ಸಲ್ಮಾರನ್ನು ನೋಡಿರಿ. ಅಬೂ ಜಹಲ್ ಅವರ ಓರ್ವ ಪಿತೃ ಸಹೋದರನ ಮಗನಾಗಿದ್ದ. ಇನ್ನೋರ್ವ ಪಿತೃ ಸಹೋದರ ವಲೀದ್ ಬಿನ್ ಮುಗೀರಃ ಮತ್ತು ಅವರ ಪುತ್ರ ಖಾಲಿದ್‌ರಿಬ್ಬರೂ ಇಸ್ಲಾಮಿನ ಕಡು ವೈರಿಗಳಾಗಿದ್ದರು. ಅವರ ಸ್ವಸಹೋದರ ಅಬ್ದುಲ್ಲಾ ಬಿನ್ ಉಮಯ್ಯ ಇಸ್ಲಾಮ್ ಮತ್ತು ಮುಸ್ಲಿಮರ ವಿರುದ್ಧ ಸದಾ ಸಕ್ರಿಯರಾಗಿದ್ದರು. ಹಾಗಿದ್ದರೂ ಆ ವೀರ ಮಹಿಳೆಯು ಇಸ್ಲಾಮ್ ಸೇರಿದರು. ಕುಟುಂಬದವರು ಬಹಳಷ್ಟು ಹಿಂಸಿಸಿದಾಗ ಊರು, ಮನೆಮಾರುಗಳನ್ನು ತೊರೆದು ಅಬಿಸೀನಿಯಾಕ್ಕೆ ವಲಸೆ ಹೋದರು.

ಖತ್ತಾಬ್‌ರ ಪುತ್ರಿ ಫಾತಿಮಾರ ಉದಾಹರಣೆಯನ್ನು ನೋಡೋಣ. ತಂದೆ ಖತ್ತಾಬ್ ಮತ್ತು ಸೋದರ ಮಾವ ಅಬೂ ಜಹಲ್ ಇಸ್ಲಾಮಿನ ವಿರೋಧದಲ್ಲಿ ಪರಸ್ಪರ ಪೈಪೋಟಿ ನಡೆಸುತ್ತಿದ್ದರು. ಸಹೋದರ ಉಮರ್ ಸತ್ಯನಿಷೇಧಿಯಾಗಿದ್ದ ಕಾಲದಲ್ಲಿ ಇಸ್ಲಾಮ್ ಮತ್ತು

ಮುಸ್ಲಿಮರೊಂದಿಗಿನ ವೈರ-ವಿದ್ವೇಷದಲ್ಲಿ ಯಾರಿಗೂ ಕಡಿಮೆಯಿರಲಿಲ್ಲ. ತಂದೆ, ಸಹೋದರ ಮತ್ತು ಮಾವನ ಧೋರಣೆಗಳನ್ನು ಫಾತಿಮಾ ಚೆನ್ನಾಗಿ ತಿಳಿದಿದ್ದರು. ಆದರೂ ಅವರು ಪತಿಯೊಂದಿಗೆ ಇಸ್ಲಾಮಿಗೆ ಸೇರಲು ಹಿಂಜರಿಯಲಿಲ್ಲ. ಸಹೋದರಿ ಮತ್ತು ಭಾವ ಮುಸ್ಲಿಮರಾದರೆಂದು ತಿಳಿದ ಉಮರ್‌ರು ಅವರ ಬಳಿಗೆ ತಲಪಿದರು. ಅವರು ಬಾಗಿಲ ಬಳಿ ತಲಪಿದ್ದರಷ್ಟೆ. ಅದೋ ಒಳಗೆ ಕುರ್‌ಆನ್ ಪಾರಾಯಣದ ಧ್ವನಿ ಕೇಳಿಸುತ್ತಿದೆ! ಕೂಡಲೇ ಒಳಹೋಗಿ ತಂಗಿ ಮತ್ತು ಭಾವನನ್ನು ಚೆನ್ನಾಗಿ ಥಳಿಸಿದರು. ಗಾಯದಿಂದ ರಕ್ತ ಸುರಿಯಿತು. ಆದರೂ ಅಲ್ಲಾಹನಲ್ಲಿ ವಿಶ್ವಾಸವಿರಿಸಿದ್ದ ಆ ಮಹಿಳೆಯು ಸಹೋದರರೊಡನೆ ನೇರವಾಗಿ ಹೇಳಿದರು, "ನೀವು ನನ್ನನ್ನು ಹೊಡೆದು ಕೊಂದರೂ ನಾನು ಗುರುತಿಸಿರುವ ಸತ್ಯವನ್ನು ತೊರೆಯಲು ಸಾಧ್ಯವಿಲ್ಲ." ಇದರಿಂದ ಸಹೋದರನ ಮನಸ್ಸು ಸ್ವಲ್ಪ ಮೆದುವಾಯಿತು. 'ನೀವಿಬ್ಬರೂ ಓದುತ್ತಿದ್ದುದೇನು? ಅದನ್ನು ನಾನೂ ಸ್ವಲ್ಪ ಆಲಿಸುತ್ತೇನೆ' ಉಮರ್ ಹೇಳಿದರು. ಸೂರಾಃ ತಾಹಾ ಉಲ್ಲೇಖಿಸಿದ್ದ ಪವಿತ್ರ ಕುರ್‌ಆನಿನ ಪುಟಗಳನ್ನು ಫಾತಿಮಾ ಅವರ ಮುಂದಿಟ್ಟರು. ಉಮರ್ ಅದನ್ನು ಓದಲಾರಂಭಿಸಿದರು. ಉಮರ್‌ರು ಓದುತ್ತಾ ಹೋದಂತೆ ಸತ್ಯವು ಅವರ ಹೃದಯವನ್ನು ತನ್ನತ್ತ ಆಕರ್ಷಿಸುತ್ತಿತ್ತು. ಓದಿ ಮುಗಿಸಿದಾಗ ಈ ತನಕ ಸತ್ಯನಿಷೇಧ ಮತ್ತು ಇಸ್ಲಾಮಿನ ವೈರದಿಂದ ತುಂಬಿ ತುಳುಕುತ್ತಿದ್ದ ಹೃದಯವು ಈಮಾನ್ ಮಯವಾಯಿತು! ಹೀಗೆ ಇತಿಹಾಸದಲ್ಲಿ ಸದಾ ಶೋಭಿಸುವ ಉಮರ್‌ರಂತಹ ಓರ್ವ ಮಹೋನ್ನತ ವ್ಯಕ್ತಿಯನ್ನು ಇಸ್ಲಾಮಿಗೆ ಆಕರ್ಷಿಸಿದ ಗೌರವಕ್ಕೆ ಆ ಮಹಿಳೆ ಪಾತ್ರರಾದರು.

ಹ. ಉಮ್ಮು ಹಬೀಬಾರ ಮಾದರಿಯು ಅತ್ಯಧಿಕ ನೀತಿ ಬೋಧಕವಾಗಿದೆ. ಅವರು ಬನೂ ಉಮೈಯ ಗೋತ್ರದಲ್ಲಿ ಜನಿಸಿದ್ದರು. ಅವರ ಕುಟುಂಬದ ಪ್ರತಿಯೊಂದು ಮಗುವಿಗೂ ಇಸ್ಲಾಮ್ ಮತ್ತು ಮುಸ್ಲಿಮರೊಂದಿಗೆ ಹಾವು-ಮುಂಗುಸಿಗಳಂಥ ವೈರವಿತ್ತು. ಉಮ್ಮು ಹಬೀಬಾರ ತಂದೆ ಅಬೂ ಸುಫ್‌ಯಾನ್ ನಿರಂತರ 21 ವರ್ಷಗಳ ಕಾಲ ಪ್ರವಾದಿಯವರ ವಿರುದ್ಧ ಹೋರಾಡಿದ್ದರು. ಅವರ ತಾಯಿ ಹಿಂದ್ ಬಿಂತು ಉತ್ಬಾ ಉಹುದ್ ರಣಾಂಗಣದಲ್ಲಿ ಹಮ್ಝಾರ ಕರುಳು ಜಗಿದ ಮಹಿಳೆಯಾಗಿದ್ದಳು. ಅವರ ಸೋದರತ್ತೆ ಮತ್ತು ಅಬೂ ಲಹಬ್‌ನ ಪತ್ನಿಯಾಗಿದ್ದ ಉಮ್ಮು ಜಮೀಲಳನ್ನು ಕುರ್‌ಆನಿನಲ್ಲಿ ಸೌದೆ ಹೊರುವವಳೆಂದು ಆರೋಪಿಸಿದೆ. ಅವರ ತಾಯಿಯ ತಂದೆ ಉತ್‌ಬಾ ಬಿನ್ ರಬೀಅ, ಇಸ್ಲಾಮನ್ನು ಉಗ್ರವಾಗಿ ವಿರೋಧಿಸುತ್ತಿದ್ದ ಕುರೈಶಿ ನಾಯಕರಲ್ಲಿ ಅಗ್ರಗಣ್ಯರಾಗಿದ್ದರು. ಇಂತಹ ಕುಟುಂಬದ ಓರ್ವ ಹೆಣ್ಣು ಮಗಳು ಇಸ್ಲಾಮಿಗೆ ಸೇರುವುದು ಎಷ್ಟೊಂದು ದುಸ್ತರವೆಂದು ಆಲೋಚಿಸಿ ನೋಡಿರಿ! ಆದರೆ, ಮಕ್ಕಾದಲ್ಲಿ ಆರಂಭದ ಐದು ವರ್ಷಗಳಲ್ಲಿ ಇಸ್ಲಾಮ್ ಸೇರಿದವರ ಪೈಕಿ ಉಮ್ಮು ಹಬೀಬಾರೂ ಒಬ್ಬರೆಂದು ತಿಳಿದಾಗ ನಿಮಗೆ ಅಚ್ಚರಿಯಾಗಬಹುದು. ಅವರೊಂದಿಗೆ ಅವರ ಪತಿಯೂ ಇಸ್ಲಾಮ್ ಸ್ವೀಕರಿಸಿದರು. ಹೀಗೆ ಅವರಿಬ್ಬರೂ ಸಾಕಷ್ಟು ಹಿಂಸೆ ದೌರ್ಜನ್ಯಗಳಿಗೆ ಗುರಿಯಾಗಬೇಕಾಯಿತು. ಎರಡು ಮೂರು ವರ್ಷ ದಾಟಿತು. ಅವರು ಅನಿವಾರ್ಯವಾಗಿ ಪತಿಯ ಜತೆ ಅಬಿಸೀನಿಯಾಕ್ಕೆ ಹೋಗಬೇಕಾಯಿತು. ಅಲ್ಲಿ ಹೋದ ಬಳಿಕ ಪತಿ ಕ್ರೈಸ್ತರಾದರು. ಆದರೆ, ಈಮಾನಿಗಾಗಿ ತಂದೆ, ತಾಯಿ, ಸಹೋದರ, ಸಹೋದರಿಯರನ್ನು ತೊರೆದು ಆ ಧೀರ

ಮಹಿಳೆಯು ಧರ್ಮಭ್ರಷ್ಟನಾದ(ಮತಾಂತರಗೊಂಡ) ಪತಿಯನ್ನೂ ತೊರೆದರು. ಹೀಗೆ ಅವರು ಒಂಟಿಯಾಗಿ ಒಂದು ಹೆಣ್ಣು ಮಗುವಿನೊಂದಿಗೆ ಪರದೇಶದಲ್ಲಿ ಬದುಕಬೇಕಾಯಿತು. ಇದರಿಂದಾಗಿ ಅವರ ವಿಶ್ವಾಸ ದಾರ್ಢ್ಯವು ಕಿಂಚಿತ್ತೂ ಕುಸಿಯಲಿಲ್ಲ. ಅವರ ವಿಶ್ವಾಸ ದಾರ್ಢ್ಯದ ಈ ಉತ್ಕೃಷ್ಟ ಗುಣದ ಪ್ರತಿಫಲವನ್ನು ಅಲ್ಲಾಹನು ಇಹಲೋಕದಲ್ಲಿಯೇ ಅವರಿಗೆ ನೀಡಿದನು. ಅವರನ್ನು ಪ್ರವಾದಿಯವರು ಪತ್ನಿಯಾಗಿ ಆಯ್ದುಕೊಂಡು ಅಬಿಸೀನಿಯಾದಲ್ಲಿರುವಾಗಲೇ ಅವರನ್ನು ವಿವಾಹವಾದರು. ಖೈಬರ್ ಯುದ್ಧ ವೇಳೆಯಲ್ಲಿ ಅವರು ಅಬಿಸೀನಿಯಾದಿಂದ ಮದೀನಾಕ್ಕೆ ಮರಳಿದರು. ಕೆಲವೇ ದಿನಗಳಲ್ಲಿ ಅವರ ತಂದೆ ಅಬೂ ಸುಫ್‌ಯಾನ್‌ರು ಸಂಧಾನ ಮಾತುಕತೆಗಳಿಗಾಗಿ ಮದೀನಾಕ್ಕೆ ಬಂದರು. ಮಗಳನ್ನು ಭೇಟಿಯಾಗಿ ಸಂಧಾನ ಮಾತುಕತೆಗಳಲ್ಲಿ ಆಕೆಯ ಸಹಾಯ ಪಡೆಯಬಹುದೆಂದು ಅವರು ಭಾವಿಸಿದ್ದರು. ಹತ್ತು-ಹನ್ನೆರಡು ವರ್ಷಗಳ ಅಗಲಿಕೆಯ ಬಳಿಕ ತಂದೆ ಮತ್ತು ಮಗಳು ಪುನಃ ಭೇಟಿಯಾಗುವ ಸಂದರ್ಭ! ಆದರೆ ಅಲ್ಲಿ ನಡೆದ ಘಟನೆಯನ್ನು ತಿಳಿದರೆ ನೀವು ಸ್ತಂಬೀಭೂತರಾಗಬಹುದು. ಸತ್ಯನಿಷೇಧಿಯಾಗಿದ್ದ ತಂದೆ, ಇಸ್ಲಾಮ್ ಸ್ವೀಕರಿಸಿದ ಮಗಳ ಮನೆಗೆ ಬರುತ್ತಾರೆ. ಅವರು ಪ್ರವಾದಿಯವರ ಹಾಸಿನಲ್ಲಿ ಕುಳಿತುಕೊಳ್ಳ ಹೊರಟಾಗ ಮಗಳು ಓಡಿ ಬಂದು ಆ ಹಾಸನ್ನು ಎಳೆದು ತೆಗೆದು ತಂದೆಯೊಡನೆ ಹೀಗೆನ್ನುತ್ತಾರೆ, "ಪ್ರವಾದಿಯವರು ಆಸೀನರಾಗುವ ಹಾಸಿನಲ್ಲಿ ಇಸ್ಲಾಮಿನ ವೈರಿ ಕುಳಿತುಕೊಳ್ಳಲು ನಾನು ಬಿಡಲಾರೆ!"

ಇದು ಮುಸ್ಲಿಮ್ ಮತ್ತು ಮೂಮಿನರಾದ ಮಹಿಳಾ ಮಣಿಗಳ ಗುಣನಡತೆಗಳು. ನೀವು ನಿಮ್ಮ ಸುರಕ್ಷೆಯನ್ನು ಬಯಸುವುದಿದ್ದರೆ ಇದೇ ಗುಣನಡತೆಗಳನ್ನು ನಿಮ್ಮಲ್ಲಿ ಬೆಳೆಸಿಕೊಳ್ಳಬೇಕು. ಚೆನ್ನಾಗಿ ನೆನಪಿಡಿರಿ! ತಂದೆ, ತಾಯಿ, ಸಹೋದರ, ಸಹೋದರಿ ಅಥವಾ ಪತಿ- ಸಂತಾನಗಳಲ್ಲಿ ಯಾರ ಹಕ್ಕುಗಳೂ ಅಲ್ಲಾಹ್ ಮತ್ತು ಪ್ರವಾದಿಯವರ ಹಕ್ಕುಗಳಿಗಿಂತ ಹಿರಿದು ಅಥವಾ ಸಮಾನವಾಗಿಲ್ಲ. ಅಲ್ಲಾಹ್ ಮತ್ತು ಪ್ರವಾದಿಯವರನ್ನು ಧಿಕ್ಕರಿಸಿ ನೀವು ಯಾರ ಮೆಚ್ಚುಗೆಯನ್ನೂ ಸಂಪಾದಿಸಬೇಕಾಗಿಲ್ಲ. ಅದಕ್ಕೆ ಅರ್ಹರು ಯಾರೂ ಇಲ್ಲ. ಅಲ್ಲಾಹ್, ಪ್ರವಾದಿ ಮತ್ತು ಧರ್ಮಕ್ಕಿಂತ ಅಮೂಲ್ಯರಾದವರು ಯಾರೂ ಇಲ್ಲ. ಅಲ್ಲಾಹನ ಭಯವಿಲ್ಲದಂತೆ ಮಾಡುವ ಯಾರ ಬಗ್ಗೆಯೂ ನೀವು ಮನದಲ್ಲಿ ಭಯವಿರಿಸಿಕೊಳ್ಳಬಾರದು. ಈ ಗುಣ ವೈಶಿಷ್ಟ್ಯವನ್ನು ನಿಮ್ಮಲ್ಲಿ ಮೈಗೂಡಿಸಿಕೊಂಡರೆ ನಿಮಗೆ ಧರ್ಮದ ಹಾದಿಯು ಸುಗಮವಾಗುವುದು. ಯಾವೊಂದು ಶಕ್ತಿಯೂ ನಿಮ್ಮನ್ನು ಸನ್ಮಾರ್ಗದಿಂದ ತಡೆಯಲಾರದು.

* * * *

ಮಹಿಳೆಯರಿಗೆ ಕೆಲವು ಆದೇಶಗಳು

ಮೌ| ಸೈಯದ್ ಅಬುಲ್ ಆಲಾ ಮೌದೂದಿ

(ಲಾಹೋರಿನ ಒಂದು ಸ್ಥಾನೀಯ ಸಭೆಯಲ್ಲಿ ಮಹಿಳಾ ಕಾರ್ಯಕರ್ತೆಯರಿಗೆ ನೀಡಿದ ಆದೇಶಗಳು)

1. ನಾವು ನಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಮುಸ್ಲಿಮರಾಗಿ, ಮುಸ್ಲಿಮರೆಂಬ ನೆಲೆಯಲ್ಲಿಯೇ ನಿರ್ವಹಿಸಬೇಕು. ಆದ್ದರಿಂದ ನೀವು ಯಾವ ಕೆಲಸವನ್ನು ಮಾಡುವಾಗಲೂ ನಿಮಗೆ ಇಸ್ಲಾಮ್ ನಿರ್ಣಯಿಸಿದ ಮಿತಿಗಳನ್ನೂ ಕರ್ತವ್ಯಗಳನ್ನೂ ಅರಿತು ವರ್ತಿಸಬೇಕು. ಇದು ನಾನು ನಿಮಗೆ ನೀಡುವ ಪ್ರಥಮ ಆದೇಶ. ಮುಸ್ಲಿಮ್ ಮಹಿಳೆಯು ತನ್ನ ಉಡುಪು ಮತ್ತು ನಡವಳಿಕೆಗಳಲ್ಲಿ ಸ್ವಾತಂತ್ರ್ಯವನ್ನು ಪಾಲಿಸಲು ಸಾಧ್ಯವಿಲ್ಲ. ಪುರುಷರೊಡನೆ ಮತ್ತು ಬಂಧು ಬಳಗದೊಡನಿರುವ ಕರ್ತವ್ಯಗಳನ್ನು ಪೂರೈಸುವುದರೊಂದಿಗೆ ತನ್ನ ಧರ್ಮ ಮತ್ತು ಪ್ರಭುವಿನೊಡನಿರುವ ಹೊಣೆಯನ್ನೂ ನಿರ್ವಹಿಸಬೇಕೆಂದು ಇಸ್ಲಾಮ್ ಆಜ್ಞಾಪಿಸುತ್ತದೆ. ಓರ್ವ ಮುಸ್ಲಿಮೇತರನಾಗಿದ್ದರೆ, ಕೇವಲ ಒಂದೇ ಅಂಶವನ್ನು ಗಮನಿಸಿ, ಇತರ ಹೊಣೆಗಾರಿಕೆಗಳಿಂದ ಜಾರಿಕೊಳ್ಳಲು ಸಾಧ್ಯವಾಗಬಹುದು. ಆದರೆ ಇಸ್ಲಾಮ್ ಅದಕ್ಕೆ ಅನುಮತಿಸುವುದಿಲ್ಲ. ಇಲ್ಲಿ ಹೆಚ್ಚು ಯಾ ಕಡಿಮೆಗೊಳಿಸುವ ಯಾವ ಅವಕಾಶವೂ ಇಲ್ಲ. ಪ್ರತಿಯೊಬ್ಬರೊಡನಿರುವ ಕರ್ತವ್ಯಗಳನ್ನು ಯಥಾವತ್ತಾಗಿ ನೆರವೇರಿಸಬೇಕು.

2. ಇಸ್ಲಾಮಿನ ಶಾಸನ ಪ್ರತಿಯೊಬ್ಬರ ಶಕ್ತ್ಯಾನುಸಾರವಿದೆಯೆಂಬುದನ್ನು ನೀವು ಗ್ರಹಿಸಬೇಕು. ಇಸ್ಲಾಮ್ ಶ್ರೀಮಂತನಿಂದ ಬಯಸುವುದನ್ನು ಬಡವನಿಂದ ಬಯಸುವುದಿಲ್ಲ. ಪ್ರಬಲನಿಂದ ಅಪೇಕ್ಷಿಸುವುದನ್ನು ದುರ್ಬಲನಿಂದ ಅಪೇಕ್ಷಿಸುವುದಿಲ್ಲ. ಆರೋಗ್ಯವಂತನಿಂದ ಬಯಸುವುದನ್ನು ರೋಗಿಯಿಂದ ಬಯಸುವುದಿಲ್ಲ. ವಿದ್ವಾಂಸನ ಕರ್ತವ್ಯಗಳು ಬೇರೆ. ಪಾಮರನ ಕರ್ತವ್ಯಗಳು ಬೇರೆ. ಹಾಗೆಯೇ ಮನೆ, ಮಕ್ಕಳು ಮತ್ತು ಇತರ ಸಂಬಂಧಿಕರ ಹೊಣೆಗಾರಿಕೆಗಳು ಅಧಿಕವಿರುವ ಮಹಿಳೆಯರಿಂದ ಆ ಹೊಣೆಗಾರಿಕೆಗಳು ಕಡಿಮೆಯಿರುವ ಮಹಿಳೆಯರಿಂದ ಬಯಸುವಂತಹ ಕರ್ತವ್ಯಗಳನ್ನು ಅಪೇಕ್ಷಿಸುವುದಿಲ್ಲ. ಅವೆರಡರಲ್ಲಿಯೂ ವ್ಯತ್ಯಾಸವಿದೆ. ನಿಮ್ಮಲ್ಲಿರುವ ನೈಜ ಸಾಮರ್ಥ್ಯಗಳನ್ನು ನೀವೇ ಸ್ವತಃ ಅಂದಾಜಿಸಬೇಕು. ತರುವಾಯ ಆ ಸಾಮರ್ಥ್ಯದ ಪ್ರಕಾರ 'ಶರಈ' ಕರ್ತವ್ಯಗಳನ್ನು ನೆರವೇರಿಸುವುದರೊಂದಿಗೆ ನಿರ್ವಹಿಸಬಹುದಾದ ಕಾರ್ಯಗಳನ್ನು ಮಾತ್ರ ಪ್ರತಿಯೊಬ್ಬರೂ ವಹಿಸಿಕೊಳ್ಳಬೇಕು. ನಿಮ್ಮಲ್ಲಿ

ಮೂಡಿರುವ ಧರ್ಮ ಪ್ರಚಾರದ ನಿಷ್ಕಳಂಕ ಭಾವನೆಯನ್ನು ನಾನು ಮನಸಾರೆ ಗೌರವಿಸುತ್ತೇನೆ. ಅದರೊಂದಿಗೆ ಮೂಮಿನ್‌ನ ವಿಶೇಷ ಸ್ವಭಾವವಾಗಿರುವ 'ಮಿತಿ ಪಾಲನೆ' ನಿಮ್ಮಲ್ಲಿರಬೇಕೆಂದು ಬಯಸುತ್ತೇನೆ. ತನ್ನ, ಮಕ್ಕಳ, ಮನೆಯ ಮತ್ತು ಕುಟುಂಬದ ಹೊಣೆಗಾರಿಕೆಯೇ ಓರ್ವ ಮಹಿಳೆಯ ನೈಜ ಹೊಣೆಗಾರಿಕೆಯಾಗಿದೆ. ಆಕೆಯು ಮೊದಲು ಅವರತ್ತ ಗಮನ ಹರಿಸಿ ಅವರನ್ನು ನೈಜ ಮುಸ್ಲಿಮರನ್ನಾಗಿ ಮಾಡಬೇಕು. ಮೊದಲು ನೀವು ಪ್ರತಿಯೊಬ್ಬರೂ ಸ್ವಯಂ ಇಸ್ಲಾಮನ್ನು ತಿಳಿಯಬೇಕು. ಜೀವನವನ್ನು ಆ ಪ್ರಕಾರ ಬದಲಾಯಿಸಬೇಕು. ಮನೆಯನ್ನು ಎಲ್ಲ ರೀತಿಯ ಜಾಹಿಲಿಯ್ಯತ್‌ನಿಂದಲೂ ಮುಕ್ತಗೊಳಿಸಬೇಕು. ಹತ್ತಿರದ ಕುಟುಂಬ ಸಂಬಂಧಿಕರನ್ನು ಇಸ್ಲಾಮಿನ ನೈಜ ಹಾದಿಗೆ ಆಮಂತ್ರಿಸಬೇಕು. 'ಶರೀಅ' ನಿಯಮದನ್ವಯ ನೀವು ವ್ಯವಹರಿಸಬಹುದಾದ ಎಲ್ಲ ಬಂಧು ಬಳಗದವರಿಂದಲೂ ಇಸ್ಲಾಮೇತರ ಪ್ರಭಾವವನ್ನು ಅಳಿಸಿ, ಅವರಿಗೆ ಇಸ್ಲಾಮಿನ ನೈಜ ತಿಳುವಳಿಕೆಯನ್ನು ನೀಡಬೇಕು. ನಿಮಗೆ ಪರಿಚಯವಾಗುವ ಕುಟುಂಬ ಮತ್ತು ನೆರೆಕರೆಯವರನ್ನು ಸುಧಾರಿಸುವ ಬಗ್ಗೆ ಆಲೋಚಿಸಬೇಕು. ಆ ಮನೆಯ ಮಹಿಳೆಯರ ಮೂಲಕ ಅಲ್ಲಿ ಇಸ್ಲಾಮಿನ ಪ್ರಕಾಶವನ್ನು ಹರಡಬೇಕು.

3. ಈ ಮೇರೆಯ ಹೊರಗಿನ ಚಟುವಟಿಕೆಗಳಿಗೆ ಕೆಲವು ಇತಿಮಿತಿಯಿದೆ. ಹೊರಗಿನ ಮಹಿಳೆಯರನ್ನು ಭೇಟಿಯಾಗಿ ಸುಧಾರಣಾ ಚಟುವಟಿಕೆಗಳನ್ನು ನಿರ್ವಹಿಸಲು ಪ್ರಾಯಸ್ಥ ಮಹಿಳೆಯರಿಗಿರುವ ಸೌಲಭ್ಯ ಮತ್ತು ಸ್ವಾತಂತ್ರ್ಯ ಯುವತಿಯರಿಗಿಲ್ಲ. ಪ್ರಾಯಸ್ಥರಂತೆ ಸ್ವತಂತ್ರವಾಗಿ ಹೊರಗಿಳಿದು ಇತರ ಮಹಿಳೆಯರ ಬಳಿ ಹೋಗಿ ಅವರಲ್ಲಿ ಸುಧಾರಣಾ ಚಟುವಟಿಕೆಗಳನ್ನು ನಿರ್ವಹಿಸಲು ಯುವತಿಯರಿಗೆ ಇಸ್ಲಾಮ್ ಅನುಮತಿ ನೀಡಿಲ್ಲ. ಅವರು ಇಸ್ಲಾಮ್ ನಿರ್ಣಯಿಸಿದ ಮಿತಿಯೊಳಗೆ ಬಾಳಬೇಕು. ನಾವು ನಾಶಪಡಿಸ ಹೊರಟಿರುವ 'ಜಾಹಿಲಿಯ್ಯತ್' ಧರ್ಮ ಪ್ರಚಾರದ ಹೆಸರಲ್ಲಿ ನಮ್ಮ ಮಹಿಳೆಯರಲ್ಲಿ ಪ್ರಸಾರವಾಗಬೇಕೆಂದು ನಾವು ಬಯಸುವುದಿಲ್ಲ.

4. ಕಾರ್ಯೋನ್ಮುಖರಾಗ ಬಯಸುವ ಮಹಿಳೆಯರ ಬಳಿ ಪುಸ್ತಕಗಳಿರಬೇಕು. ಪುಸ್ತಕಗಳನ್ನು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಹಣ ಕೊಟ್ಟು ಖರೀದಿಸಬೇಕು ಮತ್ತು ಅವಶ್ಯಕವೆನಿಸಿದರೆ ಹತ್ತಿರದ ಜಮಾಅತ್ ಲೈಬ್ರೆರಿಗಳಿಂದ ಪಡೆಯಬೇಕು. ಓದು ಬರಹ ಬಲ್ಲ ಮಹಿಳೆಯರಿಂದ ಪುಸ್ತಕ ಓದಿಸಬೇಕು. ಬರಹ ಬಾರದ ಮಹಿಳೆಯರಿಗೆ ವಿದ್ಯೆ ಕಲಿಸುವ ಮತ್ತು ಸಾಹಿತ್ಯಗಳನ್ನು ಓದಿ ಹೇಳುವ ವ್ಯವಸ್ಥೆ ಮಾಡಬೇಕು.

5. ಮಹಿಳಾ ಸಮ್ಮೇಳನದ ಬಗ್ಗೆ ನಾನು ತುಂಬಾ ಆಲೋಚಿಸಿ ನೋಡಿದೆ. ಪದೇ ಪದೇ ಸಭೆಯಲ್ಲಿ ಭಾಗವಹಿಸಲು ಅವರಿಗೆ ಸಾಧ್ಯವಿಲ್ಲವೆಂದು ನನ್ನ ಭಾವನೆ. ಆದ್ದರಿಂದ ನಗರದ ಎಲ್ಲಾ ಮಹಿಳೆಯರೂ ಸೇರಿ 2 ಯಾ 3 ತಿಂಗಳಿಗೊಮ್ಮೆ ಸಭೆ ಜರುಗಿಸಿದರೆ ಸಾಕು. ಆದರೆ ಪ್ರತಿಯೊಂದು ಮೊಹಲ್ಲದ ಮಹಿಳೆಯರು ವಾರಕ್ಕೊಮ್ಮೆ ಅಥವಾ ಎರಡು ವಾರದಲ್ಲೊಮ್ಮೆ ಸಭೆ ಸೇರಿ, ತಮ್ಮ ಚಟುವಟಿಕೆಗಳ ಪರಿಶೀಲನೆ, ಸಮೀಕ್ಷೆ ನಡೆಸಿ, ಅಡ್ಡಿ ಆತಂಕಗಳ ನಿವಾರಣೋಪಾಯಗಳನ್ನು ಕೈಗೊಂಡು ಒಗ್ಗಟ್ಟಿನಿಂದ ಕೆಲಸ ಮಾಡುವ ಕಾರ್ಯಕ್ರಮಗಳನ್ನು ರೂಪಿಸಬೇಕು.

❋ ❋ ❋ ❋

ಪ್ರಶ್ನೋತ್ತರಗಳು

[ಟೋಂಕ್‌ನಲ್ಲಿ ಜರುಗಿದ ಮಹಿಳಾ ಸಮ್ಮೇಳನದಲ್ಲಿ ಕೆಲವು ಸಹೋದರಿಯರು ಕೇಳಿದ ಪ್ರಶ್ನೆಗಳು ಮತ್ತು ಅವುಗಳಿಗೆ ಮೌ| ಸೈಯದ್ ಅಬುಲ್ ಆಲಾ ಮೌದೂದಿಯವರು ನೀಡಿದ ಉತ್ತರಗಳನ್ನು ಇಲ್ಲಿ ಕೊಡಲಾಗಿದೆ.]

ಪ್ರಶ್ನೆ: ಮಹಿಳೆಯರು ತಮ್ಮ ಮಿತಿ ಮೇರೆಯೊಳಗಿದ್ದು ಸಂದೇಶ ಪ್ರಚಾರ ಚಟುವಟಿಕೆಗಳನ್ನು ಹೇಗೆ ನಿರ್ವಹಿಸಬೇಕು?

ಉತ್ತರ: ಸಂದೇಶ ಪ್ರಚಾರಕ್ಕೆ ಯಾವ ಕೃತಕ ಮಾರ್ಗವನ್ನೂ ಅವಲಂಬಿಸಬೇಕಾಗಿಲ್ಲ. ಮಾನವನು ತಾನು ನಂಬಿರುವ ಆದರ್ಶ ಸಿದ್ಧಾಂತಗಳ ಮಾದರಿಯನ್ನು ಸ್ವಂತ ಜೀವನದಲ್ಲಿ ಪ್ರಕಟಗೊಳಿಸಿ, ತನ್ನ ಯಾವೊಂದು ಮಾತು-ಕೃತಿಯೂ ಅದಕ್ಕೆ ತದ್ವಿರುದ್ಧವಾಗದಂತೆ ಎಚ್ಚರ ವಹಿಸುವುದೇ ಸರಿಯಾದ ಸಂದೇಶ ಪ್ರಚಾರವಾಗಿದೆ. ಅದರೊಂದಿಗೆ ನಾಲಗೆ ಮತ್ತು ಲೇಖನಿಯಿಂದ ಇತರರಿಗೆ ಮನವರಿಕೆ ಮಾಡಿಸಲು ಮತ್ತು ಉಪದೇಶಿಸಲು ಪ್ರಯತ್ನಿಸಿದರೆ ಅದು ಹೆಚ್ಚು ಪರಿಣಾಮಕಾರಿಯಾಗುವುದು. ಮಾನವನು ಯಾವುದೇ ಆದರ್ಶದೆಡೆಗೆ, ಅದರ ಕಾರ್ಯಕರ್ತರ ಮೇಲಿನ ದೃಢ ವಿಶ್ವಾಸದಿಂದ ಆಕರ್ಷಿತನಾಗುವನೆಂಬುದು ಮಾನವ ಸ್ವಭಾವದ ವೈಶಿಷ್ಟ್ಯವಾಗಿದೆ. ಸ್ವಂತ ಆದರ್ಶದ ವಿಷಯದಲ್ಲಿ ನೀವು ಯಾರೊಡನೆಯೂ ಯಾವ ರೀತಿಯ ದಾಕ್ಷಿಣ್ಯವನ್ನೂ ತೋರಿಸಬಾರದು. ಇತರರ ಪ್ರಭಾವ ಮತ್ತು ಒತ್ತಡಕ್ಕೆ ನೀವು ಮಣಿದರೆ ಅವರು ನಿಮ್ಮ ಮೇಲೆ ಮತ್ತಷ್ಟು ಒತ್ತಡ ಹಾಕುತ್ತಾರೆ. ಆದರ್ಶನಿಷ್ಠೆ ಮತ್ತು ದಾಕ್ಷಿಣ್ಯ ಪರಸ್ಪರ ವಿರುದ್ಧವಾಗಿದೆ. ನಮ್ಮ ಆದರ್ಶದ ಮಟ್ಟಿಗೆ ನಾವು ಯಾವ ಸಹಿಷ್ಣುತೆಗೂ ಸಿದ್ಧರಿಲ್ಲ. ನಾವು ಸ್ವೀಕರಿಸಿದ ಸತ್ಯ ಮತ್ತು ಸನ್ಮಾರ್ಗವು ಇತರರಿಗೆ ಇಷ್ಟವಿಲ್ಲದಿದ್ದರೆ ಅವರ ದುರ್ಮಾರ್ಗವನ್ನು ನಾವೇಕೆ ಗೌರವಿಸಬೇಕು? ದುಷ್ಟರು ಮತ್ತು ದುರ್ಮಾರ್ಗಿಗಳೊಡನೆ ದಾಕ್ಷಿಣ್ಯ ತೋರುವುದು ಸಹಿಷ್ಣುತೆಯಲ್ಲ. ಬದಲಾಗಿ ಧಾರ್ಮಿಕ ದೋಷದ ಕೊರತೆ ಮತ್ತು ದೌರ್ಬಲ್ಯವಾಗಿದೆ. ಆದರೆ ಇನ್ನೊಂದು ವಿಷಯವನ್ನೂ ಗಮನದಲ್ಲಿಡಬೇಕು. ಅರ್ಥಾತ್, ಆದರ್ಶ ನಿಷ್ಠೆಯಲ್ಲಿ ನಮಗೆ ದಾಕ್ಷಿಣ್ಯವಿಲ್ಲದಿರುವಂತೆಯೇ ನಮ್ಮ ಆದರ್ಶವನ್ನು ಇತರರ ಮುಂದೆ ಸಮರ್ಪಿಸುವ, ವಿರೋಧಿಗಳು ಮತ್ತು ಟೀಕಿಸುವವರಿಗೆ

ಉತ್ತರಿಸುವಾಗ ನಮ್ಮ ನೀತಿಯು ಮೃದು ಮತ್ತು ಮಧುರವಾಗಿರಬೇಕು.

ಪ್ರಶ್ನೆ: ಮಹಿಳೆಯು ವಿವಾಹಕ್ಕಿಂತ ಮುಂಚೆ ತಂದೆ ತಾಯಂದಿರು ಮತ್ತು ಸಹೋದರರನ್ನೂ ವಿವಾಹದ ಬಳಿಕ ಪತಿಯನ್ನೂ ಪತಿ ಗೃಹದ ಹಿರಿಯರನ್ನೂ ಅನುಸರಿಸಬೇಕಾಗುತ್ತದೆ. ನಾವು ನಮ್ಮ ಜೀವನವನ್ನು ಸಂಪೂರ್ಣವಾಗಿ ಬದಲಾಯಿಸಿ, ದುರ್ಮಾರ್ಗಗಳಲ್ಲಿ ನಡೆಯಲೊಪ್ಪದೆ, ಸುಧಾರಣಾ ಚಟುವಟಿಕೆಗಳಿಗೆ ಹೊರಟರೆ ಅವರೆಲ್ಲರೂ ನಮ್ಮನ್ನು ವಿರೋಧಿಸುವ ಸಾಧ್ಯತೆಯಿದೆ. ಅಂತಹ ಸಂದರ್ಭಗಳಲ್ಲಿ ನಾವು ಅವರೊಡನೆ ಹೇಗೆ ವರ್ತಿಸಬೇಕು? ಪತಿ ಮತ್ತು ತಂದೆ ತಾಯಂದಿರ ಕರ್ತವ್ಯಗಳ ಬಗ್ಗೆ ಕುರ್‌ಆನ್ ಬಲವಾಗಿ ಆದೇಶಿಸಿದೆಯಲ್ಲವೇ?

ಉತ್ತರ: ಅಲ್ಲಾಹನ ಹೊರತು ಇತರ ಯಾರಿಗೂ ಯಾರ ಮೇಲೆಯೂ ವಾಸ್ತವಿಕ ಮತ್ತು ಸ್ವಂತವಾದ ಯಾವೊಂದು ಹಕ್ಕೂ ಇಲ್ಲವೆಂಬುದು ಪರಮ ಸತ್ಯವಾಗಿದೆ. ಮಾನವನ ಮತ್ತು ಪ್ರಪಂಚದ ಇತರ ವಸ್ತುಗಳ ಮೇಲಿನ ನೈಜ ಹಕ್ಕುಗಳು ಕೇವಲ ಅಲ್ಲಾಹನಿಗೆ ಸೇರಿದ್ದಾಗಿದೆ. ಇತರರಿಗೆ ಯಾವುದಾದರೂ ಹಕ್ಕುಗಳಿದ್ದರೂ ಅವು ನೈಜ ಹಕ್ಕುಗಳಲ್ಲ; ಕೇವಲ ಅಲ್ಲಾಹನೇ ನೀಡಿರುವುದಾಗಿದೆ. ತಂದೆ, ತಾಯಿ, ಸಹೋದರಿ, ಸಹೋದರರು, ಪತಿ ಮತ್ತಿತರ ಸಂಬಂಧಿಕರ ಹಕ್ಕುಗಳು ಅಲ್ಲಾಹನೇ ನಿರ್ಣಯಿಸಿದ್ದಾಗಿವೆ. ಎಷ್ಟು ನಿರ್ಣಯಿಸಿರುವನೋ ಕೇವಲ ಅಷ್ಟೇ ಆಗಿವೆ. ಅದರಾಚೆ ಅವರಿಗೆ ಯಾವ ಹಕ್ಕುಗಳೂ ಇಲ್ಲ. ಅವರಿಗೆ ಅನುಮತಿಸಲಾದ ಆ ಹಕ್ಕುಗಳನ್ನು ಅಲ್ಲಾಹನ ಹಕ್ಕುಗಳಿಗೆ ಮತ್ತು ಅಲ್ಲಾಹನು ನಿರ್ಣಯಿಸಿದ ನಿಬಂಧನೆಗಳಿಗೆ ಬದ್ಧವಾಗಿ ಮಾತ್ರ ನಿರ್ವಹಿಸಬೇಕಾಗಿದೆ. ಅಲ್ಲಾಹನ ಇಷ್ಟ ಮತ್ತು ನಿಯಮ ಹೇಗಿದ್ದರೂ ಚಿಂತಿಲ್ಲ, ನಾನು ಹೇಳಿದಂತೆ ಕೇಳಬೇಕೆಂದು ಆ ಪೈಕಿ ಯಾರಾದರೂ ಮಾತು ಯಾ ಕೃತಿಯಿಂದ ನಿಮ್ಮನ್ನು ಒತ್ತಾಯಿಸಿದರೆ ಅವರನ್ನು ನೀವು ಅನುಸರಿಸಬೇಕಾಗಿಲ್ಲ ಮಾತ್ರವಲ್ಲ, ಅವರನ್ನು ಧಿಕ್ಕರಿಸಬೇಕು. ಅಲ್ಲಾಹನಿಗೆ ಅವಿಧೇಯವಾಗಿ ಅನ್ಯರನ್ನು ನೀವು ಅನುಸರಿಸಿದರೆ ನಿಮ್ಮ ಈಮಾನ್ ಸಂದೇಹಾಸ್ಪದವಾಗುವುದು. ಆದರೆ ತಂದೆ, ತಾಯಿ, ಪತಿ ಮತ್ತಿತರ ಸಂಬಂಧಿಕರಿಗೆ ಅಲ್ಲಾಹನು ನಿರ್ಣಯಿಸಿರುವ ಎಲ್ಲಾ ಹಕ್ಕುಗಳನ್ನೂ ಓರ್ವ ಮುಸ್ಲಿಮ್ ಮಹಿಳೆಯು ಇತರ ಮಹಿಳೆಯರಿಗಿಂತ ಉತ್ತಮವಾಗಿ ಈಡೇರಿಸಬೇಕು. ನಿಮ್ಮ ಹಕ್ಕುಗಳನ್ನು ಇತರರು ಹೇಗೆ ಈಡೇರಿಸುತ್ತಿದ್ದಾರೆಂಬುದನ್ನು ನೋಡದೆ ಅವರ ಹಕ್ಕುಗಳನ್ನು ನೀವು ಈಡೇರಿಸಬೇಕು. ಯಾವುದೇ ರೀತಿಯ ಕಳಂಕ ಮತ್ತು ವೈಷಮ್ಯವಿಲ್ಲದಂತೆ ಅದಷ್ಟು ನೋಡಿಕೊಳ್ಳಬೇಕು. ನಿಮ್ಮ ನಾಲಗೆ ಮತ್ತು ಭಾವನೆಗಳನ್ನು ಸಂಪೂರ್ಣವಾಗಿ ನಿಯಂತ್ರಿಸಬೇಕು. ಆದರ್ಶದ ವಿಷಯದಲ್ಲಿ ಸಂಪೂರ್ಣವಾಗಿ ಸುದೃಢವಾಗಿರುವುದರೊಂದಿಗೆ ಮಾತು ವರ್ತನೆಗಳಲ್ಲಿ ಅತ್ಯಧಿಕ ಸೌಮ್ಯತೆಯನ್ನು ಪಾಲಿಸಬೇಕು.

ಪ್ರಶ್ನೆ: ಹೊಸ ಸಹೋದರಿಯರಿಗೆ ಮನಗಾಣಿಸಲಿಕ್ಕಾಗಿ ನಾವು ಭಾಷಣ ಮಾಡಬೇಕಾದ ಪ್ರಸಂಗ ಬಂದರೆ ನಾವು ಅದನ್ನು ಹೇಗೆ ನಿರ್ವಹಿಸಬೇಕು?

ಉತ್ತರ: ಅಲ್ಲಾಹನು ಭಾಷಣದ ಪ್ರತಿಭೆ ನೀಡಿರುವ ಮಹಿಳೆಯರು ನಮ್ಮ ಸಾಹಿತ್ಯಗಳನ್ನು ಶ್ರದ್ಧೆಯಿಂದ ಓದಿ ಕಲಿಯಬೇಕು. ವಿಚಾರಧಾರೆ ಮತ್ತು ಮನಸ್ಸು ಶುಭ್ರವಾದಾಗ ಭಾಷಣದ ಶೈಲಿಯು ಸ್ವಯಂ ಮೂಡಿ ಬರುತ್ತದೆ. ಈ ಬಗ್ಗೆ 'ಖುತ್‌ಬಾತ'ನ್ನು

ವಿಶೇಷವಾಗಿ ಬಳಸಬಹುದು. ವಿವರಣಾ ಶೈಲಿಯು ಬಹಳ ಸರಳ ಮತ್ತು ಸ್ಪಷ್ಟವಾಗಿರಬೇಕು. ತಿಳುವಳಿಕೆ ಕಡಿಮೆಯಿರುವವರಿಗೂ ನೀವು ಹೇಳುವ ವಿಷಯ ಮನವರಿಕೆಯಾಗಲು ಅದು ಅಗತ್ಯವಾಗಿದೆ. ಶ್ರೋತೃಗಳ ಮನೋಭಾವ ಮತ್ತು ವಿಚಾರಧಾರೆಯನ್ನು ನೀವು ಪರಿಗಣಿಸಬೇಕು. ಆರಂಭದಲ್ಲಿ ಸ್ವಲ್ಪ ಲೋಪದೋಷವುಂಟಾದರೂ ಅಂಜಬೇಕಾಗಿಲ್ಲ. ಇತರ ಕೆಲಸ ಕಾರ್ಯಗಳಂತೆಯೇ ಅದು ಅಭ್ಯಾಸದಿಂದ ರೂಢಿಸಬೇಕಾದ ಕೆಲಸವಾಗಿದೆ.

ಪ್ರಶ್ನೆ: ಇಂದು ಸಿನೆಮಾ ಸಾಂಕ್ರಾಮಿಕ ರೋಗದಂತೆ ವ್ಯಾಪಿಸಿದೆ. ಅದರ ವೀಕ್ಷಣೆಯು ಎಷ್ಟರ ಮಟ್ಟಿಗೆ ಸಮ್ಮತಾರ್ಹ? ಕೆಲವು ಚಲನ ಚಿತ್ರಗಳಲ್ಲಿ ಸಮಾಜ ಸುಧಾರಣೆಗೆ ಪೂರಕವಾದ ನೀತಿ ಪಾಠಗಳಿರುತ್ತದಲ್ಲವೇ?

ಉತ್ತರ: ಸಿನೆಮಾ ನೋಡುವುದು ಒಂದು ಮಿತಿಯ ತನಕ ಸಮ್ಮತಾರ್ಹವಲ್ಲ. ಈ ಪ್ರಶ್ನೆಗೆ ಅದನ್ನು ಸಂಪೂರ್ಣ ತೊರೆಯಬೇಕೆಂಬುದೇ ಉತ್ತರ. ಶೈಕ್ಷಣಿಕ ಮತ್ತು ನೀತಿ ಬೋಧಕವೆಂದು ಸಾಮಾನ್ಯವಾಗಿ ಹೇಳುವ ಚಲನ ಚಿತ್ರಗಳಲ್ಲಿಯೂ ಅನೈತಿಕತೆಯ ಬೀಜಗಳಿವೆ. ಈ ಕಲೆಯು ನೈತಿಕತೆಗೆ ಕಿಂಚಿತ್ತೂ ಬೆಲೆ ನೀಡದವರ ಹಸ್ತಗಳಲ್ಲಿರುವ ತನಕ ಅದರಲ್ಲಿ ಇಷ್ಟು ಮಾತ್ರ ನೋಡಬಹುದು. ಉಳಿದುದನ್ನು ನೋಡಬಾರದೆಂದು ಒಂದು ಗಡಿರೇಖೆಯನ್ನು ಎಳೆದು ತೋರಿಸಲು ಸಾಧ್ಯವಿಲ್ಲ. ಸಿನೆಮಾದಿಂದ ಯಾರಾದರೂ ಉತ್ತಮ ನೀತಿಪಾಠವನ್ನು ಕಲಿತಿರುವರೆಂದು ನಾನು ಈ ತನಕ ನೋಡಿಲ್ಲ- ಮಾತ್ರವಲ್ಲ, ಶಿಷ್ಟಾಚಾರ ಪ್ರಜ್ಞೆಯಿರುವ ಯಾರಿಗೂ ಇಂದು ಸಿನೆಮಾಗಳಲ್ಲಿ ಸಾಮಾನ್ಯವಾಗಿ ಪ್ರದರ್ಶಿಸಲಾಗುತ್ತಿರುವ ದೃಶ್ಯಗಳನ್ನು ನೋಡಿ ಸಹಿಸಲು ಸಾಧ್ಯವಿಲ್ಲವೆಂದೇ ನನ್ನ ಅಭಿಪ್ರಾಯ.

ಮುಂದೆ ಉತ್ತಮ ಕಾಲವು ಬಂದು, ಅಧಿಕಾರವು ದೇವವಿಶ್ವಾಸ ಮತ್ತು ದೇವವಿಶ್ವಾಸಕ್ಕೆ ಸಂಬಂಧಿಸಿದ ಶಿಷ್ಟಾಚಾರ ಪ್ರಜ್ಞೆಯಿರುವ ಸಜ್ಜನರ ಕೈ ಸೇರಿದರೆ ಅವರು ಈ ಕಲೆಯನ್ನು(ಸಿನೆಮಾ) ಇತರ ಕಲೆಗಳೊಂದಿಗೆ 'ಮುಸ್ಲಿಮ್' ಮತ್ತು 'ಮೂಮಿನ್' ಆಗಿ ಪರಿವರ್ತಿಸ ಬಹುದಾಗಿದೆ. ಆಗ ಅದು ನೋಡಲು ಅರ್ಹವೂ ಆಗಿರುವುದು. ಸಿನೆಮಾವನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ಆ ಮೂಲಕ ಜನಸಾಮಾನ್ಯರಿಗೆ ಇಂದಿನ ಕಾಲೇಜು ಶಿಕ್ಷಣಕ್ಕೆ ಸಮಾನವಾದ ತಿಳುವಳಿಕೆಯನ್ನು ಸುಲಭದಲ್ಲಿ ನೀಡಬಹುದು. ಅಲ್ಲಾಹನಿಚ್ಛಿಸಿದರೆ ಕಾಲಬಂದಾಗ ನಾವು ಅದನ್ನು ಜಗತ್ತಿಗೆ ಮಾಡಿ ತೋರಿಸುವೆವು. ಆದರೆ, ನಾನು ಮೊದಲು ಹೇಳಿದಂತೆ ಈಗ ಸಿನೆಮಾ ನೋಡುವುದನ್ನು ಸಂಪೂರ್ಣ ತೊರೆಯಬೇಕು.

ಪ್ರಶ್ನೆ: ಮಹಿಳೆಯರ ವಸ್ತ್ರಧಾರಣೆ ಹೇಗಿರಬೇಕು? ಪರ್ದಾ ಧರಿಸಿ ಹೊರ ಹೋಗಲು ಯಾವೆಲ್ಲ ಸ್ಥಿತಿಗಳಲ್ಲಿ ಎಷ್ಟರ ತನಕ ಅನುಮತಿಯಿದೆ?

ಉತ್ತರ: ಅಗತ್ಯವಿರುವಾಗ ಪರ್ದಾ ಧರಿಸಿ ಹೊರ ಹೋಗಬಹುದು. ಆದರೆ ಇಂದು ರೂಢಿಯಲ್ಲಿರುವಂತೆ ಇತರರನ್ನು ಆಕರ್ಷಿಸುವಂತಹ ಕಡುವರ್ಣದ ರೇಷ್ಮೆ ಬಟ್ಟೆ ಧರಿಸಿ ಮನೆಯಿಂದ ಹೊರಗೆ ಹೋಗುವುದು ಯುಕ್ತವಲ್ಲ. ಬುರ್ಖಾ ಮತ್ತು ಶಾಲು, ದೇಹ ಮತ್ತು ಸೌಂದರ್ಯವನ್ನು ಮುಚ್ಚಲಿಕ್ಕಾಗಿದೆ. ಅವುಗಳನ್ನು ಪ್ರದರ್ಶಿಸಲಿಕ್ಕಾಗಿರುವುದಲ್ಲ. ಪರ್ದಾದ 'ಶರಈ' ಮಿತಿಮೇರೆಗಳನ್ನು ತಿಳಿಯದಿರುವುದರಿಂದ ಇಂದು ಕೆಲವು ಮುಸ್ಲಿಮರು ಆ ಬಗ್ಗೆ

ಮಿತಿಮೀರಿದ ಸ್ವಾತಂತ್ರ್ಯವನ್ನು ಬಳಸಿ ತಮ್ಮ ಮಹಿಳೆಯರನ್ನು ಅರೆನಗ್ನೆಯರನ್ನಾಗಿ ನಡೆದಾಡಿಸುತ್ತಿದ್ದಾರೆ. ಇನ್ನು ಕೆಲವರು ಅವರನ್ನು (ಮಹಿಳೆಯರನ್ನು) ಮನೆಯ ನಾಲ್ಕು ಗೋಡೆಗಳ ಮಧ್ಯೆ ಬಂಧಿಸಿಡುತ್ತಿದ್ದಾರೆ. ಬಿಹಾರದಲ್ಲಿ ಮುಸ್ಲಿಮರ ಸಾಮೂಹಿಕ ಹತ್ಯೆ ನಡೆಯುತ್ತಿರುವಾಗಲೂ ಅವರ ಮಹಿಳೆಯರಿಗೆ ಪಲ್ಲಕ್ಕಿಯಿಲ್ಲದೆ ಹೊರಗಿಳಿಯಲು ಸಾಧ್ಯವಾಗಲಿಲ್ಲ. ಈ ಎರಡು ವಿಧಾನವೂ ತಪ್ಪು. ಇಂದು ಲೋಕವು ಅಗತ್ಯ ಬಂದಾಗ ಆತ್ಮರಕ್ಷಣೆಗಾಗಿ ಮಹಿಳೆಯರು ಸ್ವತಃ ಸಿದ್ಧರಾಗಬೇಕಾದಂತಹ ಪರಿಸ್ಥಿತಿಯತ್ತ ಸಾಗುತ್ತಿದೆ. ಒಂದೆಡೆಯಿಂದ ಇನ್ನೊಂದೆಡೆಗೆ ಪರರ ಸಹಾಯವಿಲ್ಲದೆ ಹೋಗಲು ಅವರಿಗೆ ಸಾಧ್ಯವಾಗಬೇಕು. ಆಪತ್ಕಾಲಗಳಲ್ಲಿ ಪುರುಷರಿಗೆ ಹೊರೆ ಮತ್ತು ಅಡ್ಡಿಯಾಗುವ ಬದಲಿಗೆ ಪುರುಷರ ಶಕ್ತಿಯನ್ನು ಹೆಚ್ಚಿಸಲು ಅವರು ಪ್ರೇರಕರಾಗಬೇಕು. ಅನುಕೂಲತೆಯಿದ್ದರೆ ಮನೆಯಲ್ಲಿ ನಮ್ಮ ಸಹೋದರಿಯರು ಸೈಕಲ್ ಸವಾರಿಯನ್ನೂ ಕಲಿಯಬೇಕೆಂದು ನಾನು ಉಪದೇಶಿಸುತ್ತೇನೆ. ಅವಶ್ಯಕ ಸಂದರ್ಭಗಳಲ್ಲಿ ಅದರಿಂದ ಪ್ರಯೋಜನವಾಗಬಹುದು.

ಪ್ರಶ್ನೆ: ಮಹಿಳೆಯರು ಪರ್ದಾ ಧರಿಸಿ ಅಗತ್ಯ ಬಿದ್ದಾಗ ಅನ್ಯ ಪುರುಷರೊಡನೆ ಮಾತಾಡಬಹುದೇ?

ಉತ್ತರ: ಹೌದು, ಅಗತ್ಯವಿದ್ದಾಗ ಮಹಿಳೆಯರು ಪರ್ದಾಧರಿಸಿ ಅನ್ಯ ಪುರುಷರೊಡನೆ ಮಾತಾಡಬಹುದು. ಆದರೆ, ಸವಿ-ಮಧುರ ಧ್ವನಿಯಲ್ಲಿ ಮಾತಾಡಬಾರದು. ಏಕೆಂದರೆ, ಪುರುಷನ ಮನದಲ್ಲಿ ಪಿಶಾಚಿಯು ತಪ್ಪು ಅಭಿಲಾಷೆಯನ್ನು ಮೂಡಿಸಲು ಅದು ಪ್ರೇರಕವಾಗಬಹುದು. ಆಯಿಶಾರವರು(ರ) ಪುರುಷರಿಗೆ ತರಗತಿಗಳನ್ನು ನಡೆಸುತ್ತಿದ್ದರು. ಒಮ್ಮೆ ಅವರು ಭಾಷಣ ಮಾಡಿ ಸೈನಿಕರಿಗೆ ಆದೇಶಗಳನ್ನೂ ನೀಡಿದ್ದರು. ಇತರ ಸಮಸ್ಯೆಗಳಂತೆಯೇ ಈ ವಿಷಯದಲ್ಲಿಯೂ ಮಿತ ಮಾರ್ಗವೇ ಸೂಕ್ತವಾಗಿದೆ. ಅರ್ಥಾತ್, ಮುಕ್ತ ಸ್ವಾತಂತ್ರ್ಯವಿರಬಾರದು. ಅಗತ್ಯವಿರುವಾಗಲೂ ಇತರರೊಡನೆ ಮಾತಾಡಬಾರದೆಂದೂ ಆಗ ಕೂಡದು.

ಪ್ರಶ್ನೆ: ಕೆಲವು ಮಹಿಳೆಯರು ಮಂತ್ರವಾದಿಗಳ ತಾಯಿತ, ನೂಲು ಇತ್ಯಾದಿಗಳಿಗೆ ಬಹಳ ಮಹತ್ವ ನೀಡುತ್ತಾರೆ. ಕಣ್ಣು ದೃಷ್ಟಿ ನಿವಾರಣೆ ಸಮ್ಮತಾರ್ಹವಾಗಿರುವಂತೆಯೇ ಇದು ಕೂಡಾ ಸಮ್ಮತಾರ್ಹವೆಂದು ಅವರು ಸಮರ್ಥಿಸುತ್ತಿದ್ದಾರೆ.

ಉತ್ತರ: ಇಂದಿನ ತಾಯಿತ ಮತ್ತು ನೂಲುಗಳೆಲ್ಲವೂ ಹೆಚ್ಚಾಗಿ ಶಿರ್ಕ್‌ಯುಕ್ತ ಮತ್ತು ಪೈಶಾಚಿಕವಾಗಿವೆ. ಅವುಗಳಲ್ಲಿ 'ಕುರ್‌ಆನೀ' ಎಂದು ಹೇಳುವಂಥವುಗಳೂ ಸಂಪೂರ್ಣ ಬದಲಾಯಿಸಲ್ಪಟ್ಟಿರುವಂತೆ ಕಾಣಿಸುತ್ತಿದೆ. ಆದ್ದರಿಂದ ಅವುಗಳನ್ನು ತೊರೆಯಬೇಕು. ಅದಲ್ಲದೇ, ಸರಿಯಾದ ಕುರ್‌ಆನೀ ಮಂತ್ರಗಳಿಗೂ ಕೇವಲ ದುಆದ(ಪ್ರಾರ್ಥನೆ) ಸ್ಥಾನವನ್ನು ಮಾತ್ರ ನೀಡ ಬಹುದು. ಅವುಗಳಿಂದಲೇ ಸುಖ ಪ್ರಾಪ್ತಿಯಾಗುವುದೆಂಬ ನಂಬಿಕೆಯೂ ಸರಿಯಲ್ಲ. ಸುಖ ಮತ್ತು ಆರೋಗ್ಯವೆಲ್ಲವೂ ಅಲ್ಲಾಹನ ಹಸ್ತದಲ್ಲಿದೆ. ಅದಕ್ಕಾಗಿ ಕೇವಲ ಆತನೊಡನೆ ಪ್ರಾರ್ಥಿಸಬೇಕು. ಸಾಮಾನ್ಯ ಸೋಮಾರಿಗಳು ಮತ್ತು ಹೇಡಿಗಳಾದ ಜನರು ಮಾತ್ರ ತಾಯಿತ ಮತ್ತು ನೂಲುಗಳಿಗೆ ಶರಣಾಗುವುದು ಕಂಡು ಬಂದಿದೆ. ಈಗಲೂ ಅದು ಅಂತಹ ಜನರ ಸಂಪ್ರದಾಯವಾಗಿದೆ.

ಪ್ರಶ್ನೆ: ವಿವಾಹಗಳಲ್ಲಿ ತಾಳಮೇಳಗಳಿಂದ ಗಾಯನ ಹಾಡುವ ರೂಢಿಯಿದೆ. ಈ ಸಮಾರಂಭಗಳಲ್ಲಿ ಭಾಗವಹಿಸಬೇಕಾಗುತ್ತದೆ. ಈ ಕುರಿತು ವಿಧಿಯೇನು? ಯಾವೆಲ್ಲ ರೀತಿಯ ವಾದ್ಯ ಘೋಷಗಳು ಸಮ್ಮತಾರ್ಹವಾಗಿವೆ?

ಉತ್ತರ: 'ದಫ್'ನ ಹೊರತು ಇತರ ಯಾವೊಂದು ವಾದ್ಯಗಳೂ ಸಮ್ಮತಾರ್ಹವಲ್ಲ. ವಿವಾಹ ಸಮಾರಂಭಗಳಲ್ಲಿ ಹುಡುಗಿಯರು ಒಟ್ಟಿಗೆ ಕುಳಿತು ಸ್ವಲ್ಪ ಹಾಡಿದರೆ, ಬಾರಿಸಿದರೆ ಅದರಲ್ಲಿ ತಪ್ಪೇನೂ ಇಲ್ಲ. ಪ್ರವಾದಿಯವರೇ ಅದಕ್ಕೆ ಅನುಮತಿಸಿದ್ದಾರೆ. ಆದರೆ, ಕೂಲಿ ಗಾಯಕಿಯರ ಮತ್ತು ನರ್ತಕಿಯರ ಗಾನಮೇಳಗಳು ಯಾವ ದೃಷ್ಟಿಯಿಂದಲೂ ಸಮ್ಮತಾರ್ಹವಲ್ಲ. ಅಂಥ ಸಮಾರಂಭಗಳಿಂದ ದೂರವಿರಬೇಕು. ವಿವಾಹಸಮಾರಂಭಗಳಲ್ಲಿ ಅಂತಹ ಏರ್ಪಾಡಿದ್ದರೆ ನೀವು ನಿಕಾಹ್ ಮತ್ತು ಔತಣದಲ್ಲಿ ಮಾತ್ರ ಭಾಗವಹಿಸಿ ಇತರ ಕಾರ್ಯಕ್ರಮಗಳಿಂದ ದೂರವಿರಬೇಕು. ನಿಮ್ಮ ನೀತಿಯು ಹೀಗಿರಬೇಕು-ಬಂಧು ಮಿತ್ರಾದಿಗಳು ಮತ್ತು ಸ್ನೇಹಿತರೊಡನೆ ಎಲ್ಲ ಸಮ್ಮತಾರ್ಹ ಕಾರ್ಯಗಳಲ್ಲಿಯೂ ಸಹಕರಿಸಬೇಕು. ಸಮ್ಮತಾರ್ಹವಲ್ಲದ ಕಾರ್ಯಗಳಿಂದ ದೂರ ಸರಿಯಬೇಕು.

✷✷✷✷